ವಿಜಯಪುರ | ಸಂಪುಟ 04 | ಸಂಚಿಕೆ 211 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily ಜನಪರ-ಜೀವಪರ ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ಅಕ್ಟೋಬರ್ 14, 2026



"ಸುದೀರ್ಘ ಕಾಲ ಆಡಳಿತ ನಡೆಸಿದ ಅನುಭವವಿರುವ ಸಿದ್ದರಾಮಯ್ಯನವರು ಕೋರ್ಟ್‌ಗಳಿಂದ ತಡೆಯಾಜ್ಞೆ ಪಡೆಯುವ ಬದಲು ದಿಟ್ಟವಾಗಿ ನಿಲ್ಲಬೇಕು. ಅಹಿಂದ ನಾಯಕರು ಇಂತಹ ಕೆಟ್ಟ ಬೆಳವಣಿಗೆಗಳನ್ನು ವಿರೋಧಿಸದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಬೆಲೆ ತೆರಬೇಕಾಗುತ್ತದೆ. ಹೀಗಾಗಿ, ಹೋರಾಟ ಮಾಡಿ, ಉನ್ನತ ತನಿಖೆ ನಡೆಸಿ."

■ ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವರು

## ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ರೈತರು ಈ ದೇಶದ ಬೆನ್ನೆಲುಬು ಎಂದು ಹೇಳುವ ಸರ್ಕಾರಗಳು ಅವರ ಸಂಕಷ್ಟಗಳಿಗೆ ಸ್ಪಂದಿಸಿ ಪರಿಹಾರ ನೀಡದಿರುವುದು ವಿಷಾದನೀಯ ಎಂದು ಯಂಕಂಚಿ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಬೇಸರ ವ್ಯಕ್ತಪಡಿಸಿದರು.

ಸಿಂದಗಿ ತಾಲೂಕಿನ ಗಬಸಾವಳಗಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ ತಡೆದು ನಡೆಸಿದ ಪ್ರತಿಭಟನೆಗೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಂಬಲ ಬೆಲೆ ನೀಡುವಂತೆ ಕೇಳುತ್ತಿದ್ದಾರೆಯೇ ಹೊರತು, ಹೆಚ್ಚಿನ ಬೇಡಿಕೆಗಳನ್ನು ಮುಂದಿಡುತ್ತಿಲ್ಲ. ಹೀಗಾಗಿ ಸರ್ಕಾರಗಳು ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿ ಅವರಿಗೆ ನ್ಯಾಯ ಒದಗಿಸಬೇಕು ಎಂದರು.

ಈ ವೇಳೆ ರೈತ ಮುಖಂಡರಾದ ಪೀರು ಕೇರೂರ, ಸಿದ್ದಣ್ಣ ಹೆಗ್ಗನದೊಡ್ಡಿ ಹಾಗೂ ಬಂಗಾರಪ್ಪಗೌಡ ಬಿರಾದಾರ ಮಾತನಾಡಿ, ರೈತರ ಸಾಲ ಮನ್ನಾ ಮಾಡಬೇಕು, ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸಬೇಕು ಹಾಗೂ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಸಮರ್ಪಕ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ರೈತರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕೃಷಿ ಕ್ಷೇತ್ರದ ಸಂಕಷ್ಟಗಳಿಗೆ ಸ್ಪಂದಿಸುವ ಮೂಲಕ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಯುವ ರೈತ ಸಂಗಮೇಶ ಡಿಗ್ಗಿ ಮಾತನಾಡಿ, ತಮ್ಮ ಕಾಮಗಾರಿಗಳಿಗೆ ಅನುದಾನ ಪಡೆಯಲು ಸಭೆ ನಡೆಸುವ ರಾಜಕಾರಣಿಗಳು ರೈತರ ಸಮಸ್ಯೆಗಳು ಎದುರಾದಾಗ ಸಭೆ ನಡೆಸಿ ಪರಿಹಾರ ಕಲ್ಪಿಸಲು ಮುಂದಾಗುತ್ತಿಲ್ಲ. ರೈತರ ಹೋರಾಟಗಳು ಪಕ್ಷಾತೀತವಾಗಿರಬೇಕು. ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ರೈತರ ಪರವಾಗಿ ಜನಪ್ರತಿನಿಧಿಗಳು ಧ್ವನಿ ಎತ್ತಬೇಕು. ವಿದೇಶಿ ವಸ್ತುಗಳ ಆಮದಿಗೆ ಬದಲಾಗಿ ಸ್ವದೇಶಿ ಉತ್ಪನ್ನಗಳಿಗೆ ಆದ್ಯತೆ ನೀಡಿದಾಗ ದೇಶದ ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರೆಯಲು ಸಾಧ್ಯ ಎಂದರು.

ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಂದಗಿ ತಾಲೂಕಿನ ಗಬಸಾವಳಗಿ ಗ್ರಾಮದ ಬಳಿ ರೈತಪರ ಸಂಘಟನೆಗಳ ನೇತೃತ್ವದಲ್ಲಿ ವಿಜಯಪುರ-ಕಲಬುರಗಿ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಪ್ರತಿಭಟನೆಯಲ್ಲಿ ಉತ್ತರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಶಂಕರಗೌಡ ಹಿರೇಗೌಡರ, ರೈತ ಸಂಘದ ಉಪಾಧ್ಯಕ್ಷ ಮಲ್ಲಣ್ಣ ಬೊಮ್ಮನಹಳ್ಳಿ, ಜಿಲ್ಲಾ ಉಪಾಧ್ಯಕ್ಷ ರಾಘವೇಂದ್ರ ಹೂಗಾರ, ತಾಲೂಕಾಧ್ಯಕ್ಷ ಬಸವರಾಜ ರಂಜುಣಗಿ, ಸುನೀಲ ಜಾಬಾನೂರ, ಮಲ್ಲಿಕಾರ್ಜುನ ಪೂಜಾರಿ, ಮಲ್ಲನಗೌಡ ಹಡಗಲಗೇರಿ, ಗಂಗಣ್ಣ ಕಡಗಂಚಿ, ಗುರುರಾಜ ಪಡಶೆಟ್ಟಿ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

ರಾಜಕೀಯ ದುರುದ್ದೇಶದಿಂದ ನನ್ನ ಚಾರಿತ್ರ್ಯಹನನದ ಪ್ರಯತ್ನ | ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

# ಸ್ಟಿಂಗ್ ಆಪರೇಷನ್ ವಿಡಿಯೋಗೂ ನನಗೂ ಸಂಬಂಧವಿಲ್ಲ!

ಬೆಂಗಳೂರು: ಕಳೆದ ಕೆಲವು ದಿನಗಳಿಂದ ರಾಜ್ಯ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಸ್ಟಿಂಗ್ ಆಪರೇಷನ್ ವಿಡಿಯೋ ಕುರಿತಂತೆ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಅವರು ಸ್ಪಷ್ಟನೆ ನೀಡಿದ್ದು, ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳ ವಿವಿಧ ವೇದಿಕೆಗಳಲ್ಲಿ ಹರಿದಾಡುತ್ತಿರುವ ಸ್ಟಿಂಗ್ ಆಪರೇಷನ್ ವಿಡಿಯೋಗೆ ನನ್ನ ಹೆಸರನ್ನು ಜೋಡಿಸಿ ಅಪಪ್ರಚಾರ ನಡೆಯುತ್ತಿರುವುದನ್ನು ಗಮನಿಸಿದ್ದೇನೆ. ಇದು ಸ್ಪಷ್ಟವಾಗಿ ರಾಜಕೀಯ ದುರುದ್ದೇಶದಿಂದ ನನ್ನ ಚಾರಿತ್ರ್ಯಹನನ ಮಾಡುವ ಪ್ರಯತ್ನದಂತೆ ಕಾಣುತ್ತಿದೆ ಎಂದಿದ್ದಾರೆ.

ಈ ಸ್ಟಿಂಗ್ ಆಪರೇಷನ್ ವಿಡಿಯೋಗೂ ನನಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಇದನ್ನು ಬಳಸಿಕೊಂಡು ಕೆಲವು ಕಿಡಿಗೇಡಿಗಳು ನನ್ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಈ ಹಿನ್ನೆಲೆಯಲ್ಲಿ ನನ್ನ ಹೆಸರಿನ ಉಲ್ಲೇಖ ಇರುವ ಈ ಸ್ಟಿಂಗ್ ಆಪರೇಷನ್ ವಿಡಿಯೋ ಅನ್ನು ಯಾವುದೇ ಪತ್ರಿಕೆ, ಚಾನೆಲ್ ಇಲ್ಲವೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಣೆ ಇಲ್ಲವೇ ಪ್ರಸಾರ ಮಾಡದಂತೆ ತಡೆನೀಡಬೇಕು ಎಂದು ಕೋರಿ ಬೆಂಗಳೂರು ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳಿದ್ದಾರೆ.



ಈ ವಿಷಯದಲ್ಲಿ ನಾನು ಸಂಪೂರ್ಣ ನಿರಪರಾಧಿ ಎನ್ನುವುದು ನನ್ನ ಆತ್ಮಸಾಕ್ಷಿಗೆ ತಿಳಿದಿದೆ. ತೆರೆದ ಪುಸ್ತಕದಂತಿರುವ ನನ್ನ ಐದು ದಶಕಗಳ ರಾಜಕೀಯ ಜೀವನದ ಅರಿವು ಇರುವ ರಾಜ್ಯದ ಜನತೆಗೂ ಇದು ಗೊತ್ತಿದೆ ಎನ್ನುವ ವಿಶ್ವಾಸ ನನಗಿದೆ. ಆದರೆ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಸುಳ್ಳನ್ನು ಸತ್ಯವಾಗಿ ಬಿಂಬಿಸುವುದು ಸುಲಭದ ಕೆಲಸವಾಗಿದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ನಾನು ನ್ಯಾಯಾಲಯದ ಮೆಟ್ಟಿಲು ಏರಿದ್ದೇನೆಯೇ ಹೊರತು ಉಳಿದಂತೆ ಯಾವ ಭಯವೂ ನನಗಿಲ್ಲ. ಅಂತಿಮವಾಗಿ ಸತ್ಯವೇ ಗೆಲ್ಲುತ್ತದೆ ಎನ್ನುವ ವಿಶ್ವಾಸವೂ ನನಗಿದೆ ಎಂದಿದ್ದಾರೆ.

ನಾನು ಸಂಪೂರ್ಣವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಇರುವವನು. ಇಲ್ಲಿಯ ವರೆಗಿನ ನನ್ನ ರಾಜಕೀಯ ಜೀವನದಲ್ಲಿ ನಾನೆಂದೂ ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಪಡಿಸಿದವನಲ್ಲ. ಆದರೆ ಕೆಲವು ಮಾಧ್ಯಮಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ ನಡೆಸುತ್ತಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ನ್ಯಾಯಾಲಯದ ಮೂಲಕ ಪ್ರಕಟಣೆ-ಪ್ರಸಾರಕ್ಕೆ ತಡೆಯಾಜ್ಞೆ ತರಬೇಕಾದ ಪ್ರಸಂಗ ಬಂದಿದೆ. ಈ ಬಗ್ಗೆ ನನಗೆ ವಿಷಾದವಿದೆ ಎಂದು ಅವರು ಹೇಳಿದ್ದಾರೆ.



"ಈ ಸ್ಟಿಂಗ್ ಆಪರೇಷನ್ ವಿಡಿಯೋ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸುವಂತೆ ನಾನು ಈಗಾಗಲೇ ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಿದ್ದೇನೆ. ಆ ತನಿಖೆಯಿಂದ ಸತ್ಯ ಹೊರಬರಲಿದೆ ಎಂಬ ವಿಶ್ವಾಸವೂ ನನಗಿದೆ. ಅಲ್ಲಿಯ ವರೆಗೆ ಮಾಧ್ಯಮಗಳು ಮಾತ್ರವಲ್ಲ ಸಾರ್ವಜನಿಕರು ಕೂಡಾ ಅನಗತ್ಯವಾಗಿ ಇಂತಹ ಸುಳ್ಳು ಸುದ್ದಿಯನ್ನು ಪ್ರಚಾರ ಮಾಡದೆ ಸತ್ಯದ ಪರವಾಗಿ ನಿಲ್ಲಬೇಕೆಂದು ಮನವಿ ಮಾಡಿಕೊಳ್ಳುವೆ."

■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ

## ಸ್ಥಳಕ್ಕೆ ಅರಣ್ಯಾಧಿಕಾರಿಗಳ ಭೇಟಿ: ಚಿರತೆ ಕಾರ್ಯಾಚರಣೆಗೆ ವೇಗ

ಚಿರತೆ ಕಾಟಕ್ಕೆ ತದ್ದೇವಾಡಿಯಲ್ಲಿ ಜಾನುವಾರುಗಳ ಬಲಿ | ಚಿರತೆ ಸೆರೆಗೆ 2 ಡ್ರೋನ್, 3 ಬೋನ್ ಅಳವಡಿಕೆ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ತಾಲೂಕಿನ ತದ್ದೇವಾಡಿ ಗ್ರಾಮದ ಅಡವಿ ವಸ್ತಿ ಪ್ರದೇಶದಲ್ಲಿ ಚಿರತೆ ಕಾಟ ಮತ್ತೆ ಶುರುವಾಗಿದ್ದು, ರೈತರು ಹಾಗೂ ಗ್ರಾಮಸ್ಥರಲ್ಲಿ ಆತಂಕ ಮನೆಮಾಡಿದೆ. ಕಳೆದ ವರ್ಷ ಇದೇ ಭಾಗದಲ್ಲಿ ಚಿರತೆ ಕಾಣಿಸಿಕೊಂಡಾಗ ಸ್ಥಳೀಯ ಗೊಲ್ಲರು ತಮ್ಮ ಪ್ರಾಣದ ಹಂಗು ತೊರೆದು ಸಾಹಸದಿಂದ ಚಿರತೆಯನ್ನು ಹಿಡಿದು ಅರಣ್ಯ ಇಲಾಖೆಗೆ ಒಪ್ಪಿಸಿದ್ದರು. ಇದೀಗ ಮತ್ತೆ ಚಿರತೆ ದಾಳಿ ನಡೆಸಿ ಎರಡು ಜಾನುವಾರುಗಳನ್ನು ಬಲಿ ಪಡೆದಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಾರ್ಯಾಚರಣೆ ಚುರುಕುಗೊಳಿಸಿದೆ.

ನಮ್ಮ ಪತ್ರಿಕೆಯಲ್ಲಿ ವರದಿ ಬಂದ ಹಿನ್ನೆಲೆಯಲ್ಲಿ ಘಟನಾ ಸ್ಥಳಕ್ಕೆ ಮಂಗಳವಾರ ವಿಜಯಪುರ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಎಂ.ಬಿ. ಕುಶನಾಳ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೆಲ್ವರಾಜ್ ನಾಯ್ಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚಿರತೆಯ ಚಲನವಲನ, ಜಾನುವಾರುಗಳ ಮೇಲೆ ನಡೆದ ದಾಳಿ ಹಾಗೂ ಅದನ್ನು ಸೆರೆಹಿಡಿಯಲು ಕೈಗೊಂಡಿರುವ ಕ್ರಮಗಳು ಹಾಗೂ ಗಸ್ತು ಕುರಿತು ಸ್ಥಳೀಯ ಅಧಿಕಾರಿ ಮಂಜುನಾಥ ಧೂಳೆ ಅವರಿಂದ ಮಾಹಿತಿ ಪಡೆದುಕೊಂಡರು.

ತದ್ದೇವಾಡಿ ಗ್ರಾಮದ ಅಡವಿ ವಸ್ತಿ ಪ್ರದೇಶದ ಕಬ್ಬಿನ ಗದ್ದೆಯಲ್ಲಿ ಭಾನುವಾರ ಬೆಳಗಿನ ಜಾವ ಚಿರತೆ ದಾಳಿ ನಡೆಸಿ ರೈತರಾದ ಶಿವಮೂರ್ತಿ ಕೋಳೂರ ಹಾಗೂ ಲಕ್ಷ್ಮಣ ಬಸಣ್ಣ ವಡಗಾಂವಿ ಅವರಿಗೆ ಸೇರಿದ ಆಕಳು ಮತ್ತು ಎಮ್ಮೆ ಕರುವನ್ನು ಕೊಂದು ಹಾಕಿದೆ ಎಂದು ತಿಳಿದುಬಂದಿದೆ. ಜಾನುವಾರುಗಳ ಸಾವು ರೈತರಿಗೆ ಆರ್ಥಿಕ ನಷ್ಟ ಉಂಟುಮಾಡಿದ್ದು, ಗ್ರಾಮದಲ್ಲಿ ಚಿರತೆಯ ಭೀತಿ ಹೆಚ್ಚಿಸಿದೆ.

ಕಳೆದ ವರ್ಷವೂ ತದ್ದೇವಾಡಿ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಭೀತಿ ಮೂಡಿಸಿತ್ತು. ಆಗ ಸ್ಥಳೀಯ ಗೊಲ್ಲರು ತಮ್ಮ ಪ್ರಾಣದ ಹಂಗು ತೊರೆದು ಧೈರ್ಯದಿಂದ ಚಿರತೆಯನ್ನು ಹಿಡಿದು ಅರಣ್ಯ ಇಲಾಖೆಗೆ ಒಪ್ಪಿಸುವ ಮೂಲಕ ಸಾಹಸ ಮೆರೆದಿದ್ದರು. ಆದರೆ ಈಗ ಮತ್ತೆ ಚಿರತೆ ದಾಳಿ ನಡೆಸಿರುವುದು ಈ ಭಾಗದ ಜನರಲ್ಲಿ ಆತಂಕ ಮೂಡಿಸಿದೆ. ಪದೇಪದೇ ಚಿರತೆ ಕಾಣಿಸಿಕೊಳ್ಳುತ್ತಿರುವುದರಿಂದ ಗ್ರಾಮಸ್ಥರು ಹೊಲ-ಗದ್ದೆಗಳಿಗೆ ತೆರಳಲು ಹಾಗೂ ಜಾನುವಾರುಗಳನ್ನು ಮೇಯಿಸಲು ಭಯಪಡುವಂತಾಗಿದೆ.




### ಚಿರತೆ ಪತ್ತೆಗೆ 2 ಡ್ರೋನ್, 3 ಬೋನ್ ಅಳವಡಿಕೆ

ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಜೇವೂರ ಸಸ್ಯಪಾಲನಾ ಮತ್ತು ಅರಣ್ಯ ಅಧಿಕಾರಿ ಮಂಜುನಾಥ ಧೂಳೆ ಅವರು ಪರಿಶೀಲನೆ ನಡೆಸಿ, ಸ್ಥಳದಲ್ಲಿ ಕಂಡುಬಂದ ಹೆಜ್ಜೆ ಗುರುತುಗಳು ಚಿರತೆಯದ್ದಾಗಿವೆ ಎಂದು ತಿಳಿಸಿದರು. ಚಿರತೆಯ ಪತ್ತೆಗಾಗಿ ಎರಡು ಡ್ರೋನ್‌ಗಳ ಮೂಲಕ ಸುತ್ತಮುತ್ತಲಿನ ಕಬ್ಬಿನ ಗದ್ದೆ ಹಾಗೂ ಅರಣ್ಯ ಪ್ರದೇಶಗಳಲ್ಲಿ ಹುಡುಕಾಟ ನಡೆಸಿದರೂ ಚಿರತೆ ಪತ್ತೆಯಾಗಿಲ್ಲ ಎಂದರು. ಚಡಚಣ ತಾಲೂಕಿನಲ್ಲಿ ಲಭ್ಯವಿದ್ದ ಒಂದು ಬೋನ್ ಜತೆಗೆ ಸಿಂದಗಿ ಹಾಗೂ ವಿಜಯಪುರದಿಂದ ಹೆಚ್ಚುವರಿಯಾಗಿ ಎರಡು ಬೋನ್‌ಗಳನ್ನು ತರಿಸಿ ಒಟ್ಟು ಮೂರು ಬೋನ್‌ಗಳನ್ನು ಅಳವಡಿಸಲಾಗಿದೆ. ಚಿರತೆಯ ಚಲನವಲನಗಳ ಮೇಲೆ ನಿಗಾ ಇಡಲು ಕ್ಯಾಮೆರಾ ಟ್ರ್ಯಾಪ್ ವ್ಯವಸ್ಥೆಯನ್ನೂ ಅಳವಡಿಸಲಾಗಿದೆ. ಚಿರತೆಯನ್ನು ಪತ್ತೆಹಚ್ಚಿ ಸೆರೆಹಿಡಿಯುವ ಕಾರ್ಯಾಚರಣೆ ಮುಂದುವರಿದಿದೆ ಎಂದು ತಿಳಿಸಿದರು.

### ರಾತ್ರಿ ಒಂಟಿಯಾಗಿ ಓಡಾಡದಂತೆ ಎಚ್ಚರಿಕೆ

ಗ್ರಾಮಸ್ಥರು ರಾತ್ರಿ ವೇಳೆ ಒಂಟಿಯಾಗಿ ಓಡಾಡಬಾರದು. ಜಾನುವಾರುಗಳನ್ನು ಮನೆಯ ಒಳಗೆ ಅಥವಾ ಸುರಕ್ಷಿತ ಸ್ಥಳಗಳಲ್ಲಿ ಕಟ್ಟಬೇಕು. ಚಿರತೆಯ ಚಲನವಲನ ಕಂಡುಬಂದರೆ ತಕ್ಷಣ ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಬೇಕು. ಚಿರತೆಯನ್ನು ಸೆರೆಹಿಡಿಯುವ ಕಾರ್ಯಾಚರಣೆಗೆ ಗ್ರಾಮಸ್ಥರು ಸಹಕರಿಸಬೇಕು ಎಂದು ವಿಜಯಪುರ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಎಂ.ಬಿ. ಕುಶನಾಳ ಮನವಿ ಮಾಡಿದ್ದಾರೆ.

## ಕ್ರೀಡೆಯಿಂದ ಸಂಘಟನಾ ಸಾಮರ್ಥ್ಯ ವೃದ್ಧಿ :ಶಾಸಕ ಮನಗೂಳಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ ಹಾಗೂ ಸಂಘಟನಾ ಸಾಮರ್ಥ್ಯ ಬೆಳೆಸಲು ಕ್ರೀಡೆ ಸಹಕಾರಿಯಾಗಿದೆ. ಓದಿನೊಂದಿಗೆ ಕ್ರೀಡೆಯಲ್ಲೂ ತೊಡಗಿಸಿಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಯುವಜನತೆ ಬದುಕಿನಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಭವಿಷ್ಯದಲ್ಲಿ ದೇಶದ ಸತ್ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಸಿಂದಗಿ ತಾಲೂಕಿನ ಯರಗಲ್ ಬಿ.ಕೆ.ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ವಿಜಯಪುರ ಹಾಗೂ ಸಿಂದಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ 2026-27ನೇ ಸಾಲಿನ ವಿಜಯಪುರ ಜಿಲ್ಲಾ ಮಟ್ಟದ 14 ಮತ್ತು 17 ವರ್ಷ ವಯೋಮಿತಿಯ ಬಾಲಕ-ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುವಜನತೆಯನ್ನು ಸಂಘಟಿಸಿ, ಅವರಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವುದು ಇಂದಿನ ಅಗತ್ಯವಾಗಿದೆ. ಕ್ರೀಡೆಯು ದೈಹಿಕ ಸಾಮರ್ಥ್ಯದ ಜೊತೆಗೆ ಮಾನಸಿಕ ಬೆಳವಣಿಗೆಗೂ ಪೂರಕವಾಗಿದೆ. ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಪರಸ್ಪರ ಸಹಕಾರ, ಶಿಸ್ತು, ನಾಯಕತ್ವ ಹಾಗೂ ತಂಡದ ಮನೋಭಾವ ಬೆಳೆದು, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತದೆ. ಶಿಕ್ಷಣದ ಜೊತೆಗೆ ಕ್ರೀಡೆಗೂ ಹೆಚ್ಚಿನ ಮಹತ್ವ ನೀಡಬೇಕು. ಕ್ರೀಡೆಯನ್ನು ಕೇವಲ ಮನರಂಜನೆಗೆ ಸೀಮಿತಗೊಳಿಸದೆ, ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಚಟುವಟಿಕೆಯಾಗಿ ಪರಿಗಣಿಸಬೇಕು. ವಿದ್ಯಾರ್ಥಿಗಳು ಕ್ರೀಡಾಸ್ಫೂರ್ತಿಯಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಅಭಿನಂದನ ಗುರೂಜಿ, ರಾಜಶೇಖರ ಕೂಚಬಾಳ, ಅರವಿಂದ ಹಂಗರಗಿ, ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್. ಆಲಗೂರ, ಖಾದೀರ ಬಂಕಲಗಿ, ಮಹಾಂತಗೌಡ ಪಾಟೀಲ, ಭಾಗಪ್ಪಗೌಡ ಪಾಟೀಲ ಆಹೇರಿ, ಮಡಿವಾಳಪ್ಪ ಕಡಲಗೊಂಡ, ಬಲವಂತಪ್ಪ ಹೂಗಾರ, ಸಾಹಿಪಟೇಲ ಅವಟಿ, ಗುರುಲಿಂಗಪ್ಪ ಪಾಟೀಲ, ಎನ್.ವಿ.ಕುಲಕರ್ಣಿ, ಎಂ.ಎಂ. ಹಂಗರಗಿ, ಶಿವಾನಂದ ಬದರಿ, ಸಿದ್ಧಲಿಂಗ ಚೌಧರಿ, ರವಿ ಬಿರಾದಾರ ಸೇರಿದಂತೆ ತಾಲೂಕಿನ ದೈಹಿಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಕುರುಬರ ಕಲೆ-ಸಂಸ್ಕೃತಿ ಅಕಾಡೆಮಿ ಸ್ಥಾಪಿಸುವಂತೆ ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಗತ್ತಿನ ಮೂಲ ಸಂಸ್ಕೃತಿಯನ್ನು ಒಳಗೊಂಡ ಕುರುಬ ಜನಾಂಗದ ಕಲೆಗಳಾದ ಡೊಳ್ಳಿನ ಪದ, ಡೊಳ್ಳಿನ ಕೈಪಟ್ಟು, ಡೊಳ್ಳಿನ ವಾಲಗ, ಡೊಳ್ಳು ಕುಣಿತ, ದಟ್ಟಿ ಕುಣಿತ, ವಾರ್ಣ, ಹರಕೆ ಹಾಡು, ಹೊಳೆ ಪೂಜೆ ಹಾಡು, ಕಂಬಳಿ ದ್ವಜ ಕುಣಿತ, ಸತ್ತಿಗೆ ಕುಣಿತ, ವೀರಗಾರ ಕುಣಿತ,ಕಹಳೆ, ಗೊರವರ ಹಾಡು, ಗೊರವರ ಕುಣಿತ, ವೀರ ಮಕ್ಕಳ ಹಾಡು, ವೀರಮಕ್ಕಳ ಕುಣಿತ, ವಗ್ಗಯ್ಯರ ಪದ, ವಗ್ಗಯ್ಯರ ಕುಣಿತ, ಅಲಗು ಕುಣಿತ, ಗುಂಡು ಬಡೆಯುವ ಕುಣಿತ, ಟಗರು ಜೋಗಿ ಕಥೆ, ಟಗರು ಜೋಗಿ ಕುಣಿತ ಚೌಗಢ ವಾದನ, ತಾಳವಾದನ, ಹೆಳವರ ಹೇಳಿಕೆ, ಗಂಗೀ ಶೀತಾಳ ಪದ, ಬೆಡಗಿನ ವಚನಗಳು, ಸವಾಲ್ ಜವಾಬ್ ಹಾಡುಗಳು ಮುಂತಾದ ಕಲೆಗಳು ಮತ್ತು ಕುರಿ ಸಾಕಾಣಿಕೆ, ಪಶು ಪಾಲನೆ, ಕಂಬಳಿ ನೇಕಾರಿಕೆ, ಟಗರು ಕಾಳಗ, ದಡ್ಡಿ ಹಬ್ಬ, ಭಂಡಾರ ಜಾತ್ರೆಗಳು, ಸಿದ್ದರ ಪಲ್ಲಕ್ಕಿ ಭೇಟಿ, ಮುಂತಾದ ವಿಶೇಷ ಸಂಸ್ಕೃತಿಯನ್ನು ಒಳಗೊಂಡಿರುವ ಅತ್ಯಂತ ಹಿಂದುಳಿದಿರುವ ಕುರುಬ ಜನಾಂಗದ ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ರಾಜ್ಯದ ಕುರುಬರೆಲ್ಲರಿಗೂ ಅನುಕೂಲವಾಗುವಂತೆ ಕುರುಬರ ಕಲೆ ಮತ್ತು ಸಂಸ್ಕೃತಿ ಅಕಾಡೆಮಿ ಮಾಡಿ ಸಾಂಸ್ಕೃತಿಕ ಅವಕಾಶಗಳಿಂದ ವಂಚಿತರಾಗಿರುವ ಮುಗ್ಧ ಜನಾಂಗಕ್ಕೆ ಅನುಕೂಲ ಮಾಡಿಕೊಡಬೇಕೆಂದು ವಿಜಯಪುರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಿದ್ದು ಧನಗೊಂಡ ಮಾತನಾಡುತ್ತಾ ಈ ಅಕಾಡೆಮಿಯು ರಚನೆಯಾದರೆ ಕುರುಬರ ಕಲೆಗಳನ್ನು ರಕ್ಷಣೆ ಮಾಡುವ ರಕ್ಷಣಾ ಕವಚವಾದಂತಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಶ್ರೀ ಸತೀಶ್ ಅಡವಿ, ಮಲ್ಲು ಬಿದರಿ, ಮಲ್ಲಣ್ಣ ಶಿರಶ್ಯಾಡ ರಾಜು ಕಗ್ಗೋಡ, ಸಿದ್ದರಾಮ ಪೂಜಾರಿ, ಇತರರು ಉಪಸ್ಥಿತರಿದ್ದರು

## ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ತಾಲೂಕಿನಲ್ಲಿ ಎಲ್ಲಿಯೂ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಿ. ಇಂದಿನಿಂದ ಕೃಷ್ಣಾ ಕಾಲುವೆಗೆ ನೀರು ಬರುತ್ತಿದ್ದು ಎಲ್ಲ ಕೆರೆಗಳನ್ನು ತುಂಬಿ ಜನರಿಗೆ ಕುಡಿಯುವ ನೀರಿನ ಅನುಕೂಲವಾಗುವಂತೆ ಮಾಡಿ ಎಂದು ಜಿ.ಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಆನಂದ ಪ್ರಕಾಶ ಮೀನಾ ಹೇಳಿದರು.

ನಗರದ ತಾ.ಪಂ ಸಭಾಭವನದಲ್ಲಿ ಇಂಡಿ ಮತ್ತು ಚಡಚಣ ತಾಲೂಕುಗಳ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಇ ಸ್ವತ್ತು ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವದು, ಭಾರತ ಜೋಡೊ ಪ್ರಗತಿ ಹಾಗೂ ಬಾಕಿ ಇರುವ ವಸತಿ ಯೋಜನೆಗಳಿಡಿ ಮನೆ ನಿರ್ಮಾಣ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ವಿಜಿ ರಾಮಜಿ ಯೋಜನೆಯಡಿ ಗ್ರಾಪಂಗಳಲ್ಲಿ ನೊಂದಾಯುತವಾಗಿರುವ ಅರ್ಹ ಕೂಲಿಕಾರರಿಗೆ ಉದ್ಯೋಗ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಅಲ್ಲದೆ ಕಾಮಗಾರಿಗಳ ಪ್ರಗತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವದರ ಜೊತೆಗೆ ಕೂಲಿಕಾರರಿಗೆ ನಿಗದಿತ ಅವಧಿಯೊಳಗೆ ಕೂಲಿ ಪಾವತಿಯಾಗುವಂತೆ ಕ್ರಮ ವಹಿಸಲು ತಿಳಿಸಿದರು.

ಇಂಡಿ ತಾಪಂ ಇಒ ಮಹಾದೇವಪ್ಪ ಏವೂರ, ಚಡಚಣ ಇಒ ಅಶೋಕಕುಮಾರ ರಾಠೋಡ, ಗ್ರಾಮೀಣ ನೀರಿ ಸರಬರಾಜು ಅಭಿಯಂತರ ಬಂಡಿ, ಸಂಜಯ ಖಡಗೇಕರ, ಪ್ರಕಾಶ ರಾಠೋಡ, ಶಿವದತ್ತ ಕೊಟ್ಟಲಗಿ ಮತ್ತಿತರಿದ್ದರು.

■ ಇಂಡಿ ಮತ್ತು ಚಡಚಣ ತಾಲೂಕುಗಳ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಪಂ ಸಿಇಓ ಆನಂದ ಪ್ರಕಾಶ ಮೀನಾ ಅಧಿಕಾರಿಗಳಿಗೆ ಸೂಚನೆ

# ಕೆಂಪು ಸಮುದ್ರದ ಅಂಚಿನಲ್ಲಿ ಹೊಸ ಮಹಾಸಂಘರ್ಷದ ಮುನ್ಸೂಚನೆ!




ಆಕಾಶ ರೋಡಗಿ.
ಶಿವೂರ – ಅಫಜಲಪುರ

**ಇಥಿಯೋಪಿಯಾದ ಸು-30 ಯುದ್ಧವಿಮಾನಗಳಿಗೆ ಭಾರತದ ಅಸ್ತ್ರ ಕ್ಷಿಪಣಿಗಳನ್ನು ಒದಗಿಸುವ ಕುರಿತು ಕೇಳಿಬರುತ್ತಿರುವ ವರದಿಗಳನ್ನು ಅಧಿಕೃತ ದೃಢೀಕರಣವಿಲ್ಲದೆ ಅಂತಿಮ ಒಪ್ಪಂದವೆಂದು ಪರಿಗಣಿಸಬಾರದು. ಭಾರತವು ಇಥಿಯೋಪಿಯಾದೊಂದಿಗೆ ಸಂಬಂಧ ಬಲಪಡಿಸುವುದರ ಜೊತೆಗೆ ಎರಿಟ್ರಿಯಾ, ಸೊಮಾಲಿಯಾ ಮತ್ತು ಜಿಬೂಟಿಯೊಂದಿಗೂ ಸಮತೋಲಿತ ಸಂಬಂಧಗಳನ್ನು ಉಳಿಸಿಕೊಳ್ಳಬೇಕು.**

■ ಉದಯರಶ್ಮಿ ದಿನಪತ್ರಿಕೆ

ಟಿಗ್ರೆಯ ಕದನ, ಇಥಿಯೋಪಿಯಾ–ಎರಿಟ್ರಿಯಾ ಉದ್ವಿಗ್ನತೆ, ನೈಲ್ ನದಿಯ ಜಲವಿವಾದ ಮತ್ತು ಬಂದರುಗಳ ಮೇಲಿನ ಪೈಪೋಟಿ; ಭಾರತದ ಮುಂದಿರುವ ರಾಜತಾಂತ್ರಿಕ ಸವಾಲು!

ಜಾಗತಿಕ ರಾಜಕಾರಣದ ಭೂಪಟದಲ್ಲಿ ಈಗ ಹಾರ್ನ್ ಆಫ್ ಆಫ್ರಿಕಾ ಮತ್ತೊಮ್ಮೆ ಮಹತ್ವದ ಸಂಘರ್ಷದ ಕೇಂದ್ರವಾಗಿ ಗಮನ ಸೆಳೆಯುತ್ತಿದೆ. ಇಥಿಯೋಪಿಯಾ, ಎರಿಟ್ರಿಯಾ, ಸೊಮಾಲಿಯಾ ಮತ್ತು ಜಿಬೂಟಿಯನ್ನು ಒಳಗೊಂಡ ಈ ಪ್ರದೇಶವು ಕೆಂಪು ಸಮುದ್ರ, ಏಡನ್ ಕೊಲ್ಲಿ ಮತ್ತು ಹಿಂದೂ ಮಹಾಸಾಗರವನ್ನು ಸಂಪರ್ಕಿಸುವ ಆಯಕಟ್ಟಿನ ವಲಯವಾಗಿದೆ. ಇಲ್ಲಿ ಉಂಟಾಗುವ ಅಸ್ಥಿರತೆ ಆಫ್ರಿಕಾದ ಗಡಿಗಳನ್ನು ಮೀರಿ ಜಾಗತಿಕ ವ್ಯಾಪಾರ, ಇಂಧನ ಸಾಗಣೆ ಮತ್ತು ಭಾರತದ ಆರ್ಥಿಕ ಹಿತಾಸಕ್ತಿಗಳ ಮೇಲೂ ಪರಿಣಾಮ ಬೀರಬಲ್ಲದು.

ಟಿಗ್ರೆಯಿಂದ ಗಡಿವರೆಗೆ: ಮತ್ತೆ ಸಂಘರ್ಷದ ಆತಂಕ! 2020 2022ರ ಟಿಗ್ರೆ ಯುದ್ಧದ ನಂತರವೂ ಇಥಿಯೋಪಿಯಾದ ಆಂತರಿಕ ರಾಜಕೀಯ ಬಿಕ್ಕಟ್ಟು ಸಂಪೂರ್ಣವಾಗಿ ಬಗೆಹರಿದಿಲ್ಲ. 2022ರ ಪ್ರಿಟೋರಿಯಾ ಶಾಂತಿ ಒಪ್ಪಂದವು ಸಂಘರ್ಷ ತಗ್ಗಿಸಲು ನೆರವಾದರೂ, ನಿರಸ್ತ್ರೀಕರಣ, ಸ್ಥಳಾಂತರಗೊಂಡವರ ಪುನರ್ವಸತಿ ಮತ್ತು ರಾಜಕೀಯ ಅಧಿಕಾರದ ಪ್ರಶ್ನೆಗಳು ಇನ್ನೂ ಸವಾಲಾಗಿವೆ. ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇಥಿಯೋಪಿಯಾ–ಎರಿಟ್ರಿಯಾ ನಡುವಿನ ಉದ್ವಿಗ್ನತೆ ಮತ್ತಷ್ಟು ಆತಂಕ ಮೂಡಿಸಿದೆ. ಎರಿಟ್ರಿಯಾದ ಪಡೆಗಳು ತನ್ನ ಭೂಪ್ರದೇಶದೊಳಗೆ ಸುಮಾರು 60 ಕಿಲೋಮೀಟರ್ ನುಗ್ಗಿವೆ ಎಂದು ಇಥಿಯೋಪಿಯಾ ಆರೋಪಿಸಿರುವುದಾಗಿ ವರದಿಯಾಗಿದೆ. ಎರಿಟ್ರಿಯಾ ಈ ಆರೋಪವನ್ನು ನಿರಾಕರಿಸಿದೆ. ಈ ಆರೋಪಗಳ ಸ್ವತಂತ್ರ ದೃಢೀಕರಣ ಅಗತ್ಯವಿದ್ದರೂ, ಉಭಯ ದೇಶಗಳ ನಡುವೆ ನೇರ ಯುದ್ಧ ಸಂಭವಿಸಿದರೆ ಇಡೀ ಪ್ರದೇಶದ ಭದ್ರತೆ ಅಪಾಯಕ್ಕೀಡಾಗಬಹುದು.



ಸಮುದ್ರ ಪ್ರವೇಶವೇ ಸಂಘರ್ಷದ ಕೇಂದ್ರಬಿಂದು!

1993ರಲ್ಲಿ ಎರಿಟ್ರಿಯಾ ಸ್ವಾತಂತ್ರ್ಯ ಪಡೆದ ನಂತರ ಇಥಿಯೋಪಿಯಾ ಭೂಆವೃತ ರಾಷ್ಟ್ರವಾಯಿತು. ತನ್ನ ವಿದೇಶಿ ವ್ಯಾಪಾರದ ಬಹುಪಾಲಿಗೆ ಜಿಬೂಟಿಯ ಬಂದರುಗಳನ್ನು ಅವಲಂಬಿಸಿರುವ ಇಥಿಯೋಪಿಯಾ, ಕೆಂಪು ಸಮುದ್ರಕ್ಕೆ ಪ್ರವೇಶ ಪಡೆಯುವ ಆಸಕ್ತಿಯನ್ನು ವ್ಯಕ್ತಪಡಿಸುತ್ತಿದೆ. ಎರಿಟ್ರಿಯಾದ ಅಸ್ಸಬ್ ಮತ್ತು ಸೊಮಾಲಿಲ್ಯಾಂಡ್‌ನ ಬರ್ಬರಾ ಬಂದರುಗಳು ಈ ಹಿನ್ನೆಲೆಯಲ್ಲಿ ಮಹತ್ವ ಪಡೆದಿವೆ.

ಆದರೆ ಸಮುದ್ರ ಪ್ರವೇಶದ ಆರ್ಥಿಕ ಅಗತ್ಯವು ಮತ್ತೊಂದು ರಾಷ್ಟ್ರದ ಭೂಪ್ರದೇಶವನ್ನು ವಶಪಡಿಸಿಕೊಳ್ಳುವ ಹಕ್ಕನ್ನು ನೀಡುವುದಿಲ್ಲ. ಪರಸ್ಪರ ಒಪ್ಪಂದ, ದೀರ್ಘಕಾಲೀನ ಬಂದರು ಗುತ್ತಿಗೆ ಮತ್ತು ಶಾಂತಿಯುತ ಮಾತುಕತೆಗಳೇ ಸೂಕ್ತ ಪರಿಹಾರ.





ನೈಲ್ ನದಿಯ ನೀರು ಮತ್ತು ಜಾಗತಿಕ ಶಕ್ತಿಗಳ ಪೈಪೋಟಿ

ಇಥಿಯೋಪಿಯಾದ ಗ್ರ್ಯಾಂಡ್ ಇಥಿಯೋಪಿಯನ್ ರೆನೈಸಾನ್ಸ್ ಡ್ಯಾಮ್ (ಉಇಖಆ) ಜಲವಿದ್ಯುತ್ ಯೋಜನೆಯು ಈಜಿಪ್ಟ್ ಮತ್ತು ಸುಡಾನ್‌ನಲ್ಲಿ ನೀರಿನ ಹರಿವಿನ ಕುರಿತು ಆತಂಕ ಮೂಡಿಸಿದೆ. 2015ರ ತತ್ವಗಳ ಘೋಷಣೆಯಿದ್ದರೂ, ಅಣೆಕಟ್ಟಿನ ಕಾರ್ಯಾಚರಣೆ ಮತ್ತು ನೀರಿನ ಹಂಚಿಕೆ ಕುರಿತು ಭಿನ್ನಾಭಿಪ್ರಾಯಗಳು ಮುಂದುವರಿದಿವೆ. ಇದರೊಂದಿಗೆ ಟರ್ಕಿಯ ಸೊಮಾಲಿಯಾ ಸಂಬಂಧಗಳು, ಯುಎಇಯ ಬರ್ಬರಾ ಬಂದರು ಹೂಡಿಕೆ ಹಾಗೂ ಸೌದಿ ಅರೇಬಿಯಾದ ಕೆಂಪು ಸಮುದ್ರದ ಭದ್ರತಾ ಹಿತಾಸಕ್ತಿಗಳು ಪ್ರಾದೇಶಿಕ ಪೈಪೋಟಿಯನ್ನು ಸಂಕೀರ್ಣಗೊಳಿಸಿವೆ. ಜಿಬೂಟಿಯಲ್ಲಿ ಚೀನಾ ಮತ್ತು ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳ ಸೇನಾ ನೆಲೆಗಳಿರುವುದು ಈ ಪ್ರದೇಶದ ಜಾಗತಿಕ ಮಹತ್ವವನ್ನು ಎತ್ತಿತೋರಿಸುತ್ತದೆ. ಭಾರತದ ರಾಜತಾಂತ್ರಿಕ ಸವಾಲು 2026ರ ಅಕ್ಟೋಬರ್ 8ರಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಇಥಿಯೋಪಿಯಾ ಭೇಟಿಯು ಭಾರತ ಇಥಿಯೋಪಿಯಾ ಸಂಬಂಧಗಳ ದೃಷ್ಟಿಯಿಂದ ಮಹತ್ವದ್ದಾಗಿದೆ. ವ್ಯಾಪಾರ, ಶಿಕ್ಷಣ, ತಂತ್ರಜ್ಞಾನ ಮತ್ತು ಅಭಿವೃದ್ಧಿ ಸಹಕಾರದ ಜೊತೆಗೆ ಕಡಲ ಭದ್ರತೆಯೂ ಭಾರತದ ಪ್ರಮುಖ ಹಿತಾಸಕ್ತಿಯಾಗಿದೆ. ಇಥಿಯೋಪಿಯಾದ ಸು–30 ಯುದ್ಧ ವಿಮಾನಗಳಿಗೆ ಭಾರತದ ಅಸ್ತ್ರ ಕ್ಷಿಪಣಿಗಳನ್ನು ಒದಗಿಸುವ ಕುರಿತು ಕೇಳಿಬರುತ್ತಿರುವ ವರದಿಗಳನ್ನು ಅಧಿಕೃತ ದೃಢೀಕರಣವಿಲ್ಲದೆ ಅಂತಿಮ ಒಪ್ಪಂದವೆಂದು ಪರಿಗಣಿಸಬಾರದು. ಭಾರತವು ಇಥಿಯೋಪಿಯಾದೊಂದಿಗೆ ಸಂಬಂಧ ಬಲಪಡಿಸುವುದರ ಜೊತೆಗೆ ಎರಿಟ್ರಿಯಾ, ಸೊಮಾಲಿಯಾ ಮತ್ತು ಜಿಬೂಟಿಯೊಂದಿಗೂ ಸಮತೋಲಿತ ಸಂಬಂಧಗಳನ್ನು ಉಳಿಸಿಕೊಳ್ಳಬೇಕು. ಕೆಂಪು ಸಮುದ್ರದ ಅಸ್ಥಿರತೆಯು ಹಡಗು ಸಾಗಣೆ ವೆಚ್ಚ, ಪೂರೈಕೆ ಸರಪಳಿ ಮತ್ತು ಭಾರತೀಯ ಪ್ರಜೆಗಳ ಸುರಕ್ಷತೆಯ ಮೇಲೂ ಪರಿಣಾಮ ಬೀರಬಹುದು. ಕೊನೆಯ ಮಾತು



ಹಾರ್ನ್ ಆಫ್ ಆಫ್ರಿಕಾದ ಬಿಕ್ಕಟ್ಟು ಕೇವಲ ಗಡಿ ಸಂಘರ್ಷವಲ್ಲ; ಇದು ಸಮುದ್ರ ಪ್ರವೇಶ, ಜಲಸಂಪನ್ಮೂಲ, ಬಂದರುಗಳು ಮತ್ತು ಜಾಗತಿಕ ಪ್ರಭಾವಕ್ಕಾಗಿ ನಡೆಯುತ್ತಿರುವ ಬಹುಮುಖ ಪೈಪೋಟಿ. ವಿಶ್ವಸಂಸ್ಥೆ, ಆಫ್ರಿಕನ್ ಯೂನಿಯನ್ ಮತ್ತು ಪ್ರಾದೇಶಿಕ ರಾಷ್ಟ್ರಗಳು ಮಾತುಕತೆಗೆ ಆದ್ಯತೆ ನೀಡದಿದ್ದರೆ ಮತ್ತೊಂದು ಮಾನವೀಯ ಬಿಕ್ಕಟ್ಟು ಎದುರಾಗಬಹುದು. ಭಾರತಕ್ಕೆ ಬೇಕಿರುವುದು ಯುದ್ಧದ ಬಣವಲ್ಲ, ದೂರದೃಷ್ಟಿಯ ರಾಜತಾಂತ್ರಿಕತೆ. ಏಕೆಂದರೆ ಕೆಂಪು ಸಮುದ್ರದಲ್ಲಿ ಹೊತ್ತಿಕೊಳ್ಳುವ ಕಿಡಿ ಆಫ್ರಿಕಾದ ಗಡಿಗಳಲ್ಲೇ ನಿಲ್ಲದೆ, ಜಾಗತಿಕ ವ್ಯಾಪಾರದ ನರನಾಡಿಗಳ ಮೂಲಕ ಭಾರತವನ್ನೂ ತಲುಪಬಹುದು.

ಅಂತಿಮವಾಗಿ, ಬಂದರುಗಳ ಮೇಲೆ ಯಾರ ಧ್ವಜ ಹಾರುತ್ತದೆ ಎನ್ನುವುದಕ್ಕಿಂತ, ಸಂಘರ್ಷದ ಬದಲಿಗೆ ಸಹಕಾರದ ಧ್ವಜವನ್ನು ಯಾರು ಎತ್ತುತ್ತಾರೆ ಎಂಬುದೇ ಹಾರ್ನ್ ಆಫ್ ಆಫ್ರಿಕಾದ ಭವಿಷ್ಯವನ್ನು ನಿರ್ಧರಿಸಲಿದೆ.

# ಯಶಸ್ವೀ ಮಹಿಳೆಯ ಹಿಂದೆ ಅವಳ ಪತಿಯ ಪಾಲಿರುತ್ತದೆ

■ ಉದಯರಶ್ಮಿ ದಿನಪತ್ರಿಕೆ

## ಭಾವರಶ್ಮಿ

ಒಂದು ಹೆಣ್ಣು ಮಗು ಜನಿಸಿದ ತಕ್ಷಣ ಹೆತ್ತವರಿಗೆ ಕಾಡುವ ಪ್ರಶ್ನೆ ಸುಭದ್ರತೆ ಮತ್ತು ಸುರಕ್ಷಿತವಾದಂತಹ, ಭವಿಷ್ಯ ನೀಡುವುದರ ಜೊತೆಗೆ ಅವಳ ಜೀವನವನ್ನು ಸಫಲವಾಗಿಸಲು ಒಳ್ಳೆಯ ವ್ಯಕ್ತಿಯ ಅವಶ್ಯಕತೆ ಇರುತ್ತದೆ ಆ ವ್ಯಕ್ತಿ ಅವಳ ಪತಿ ದೇವರಾಗಿರುತ್ತಾನೆ,

ಸಮಾಜದಲ್ಲಿ ಹೆಣ್ಣುಮಕ್ಕಳು ಗೌರವಕ್ಕೆ ಪಾತ್ರರಾಗುವದೇ ಪುರುಷ ಪ್ರಧಾನ ಸಮಾಜಲ್ಲಿಯೂ, ಸಹ ಅವಳಿಗೆ ಅವಳ ಭಾವನೆಗೆ ಬೆಲೆಸಿಕ್ಕಾಗ ಮಾತ್ರ ಸಾಧ್ಯವಾಗುತ್ತದೆ

ಬದಲಾಗುತ್ತಿರುವ ಆಧುನಿಕ ಸಮಾಜದಲ್ಲಿ ಮಹಿಳೆಯರ ವೃತ್ತಿಪರ ಮತ್ತು ವೈಯಕ್ತಿಕ ಸಾಧನೆಗಳ ಹಿಂದೆ ಅವರ ಪತಿಯ ಬೆಂಬಲ ಹಾಗೂ ಪ್ರೋತ್ಸಾಹದ ಪಾತ್ರ ಅತ್ಯಂತ ದೊಡ್ಡದಾಗಿರುತ್ತದೆ. ನಂಬಿಕೆ, ಜವಾಬ್ದಾರಿಗಳ ಹಂಚಿಕೆ ಮತ್ತು ಸಮಾಜದ ಟೀಕೆಗಳಿಗೆ ತಡೆಗೋಡೆಯಾಗಿ ನಿಲ್ಲುವ ಸಂಗಾತಿಯು ಮಹಿಳೆಯನ್ನು ಉನ್ನತ ಸ್ಥಾನಕ್ಕೇರಿಸಲು ಪ್ರಮುಖ ಕಾರಣರಾಗುತ್ತಾರೆ. ಒಂದೇ ಉದಾಹರಣೆ ನೋಡುವಾದಾದರೆ ಸುಧಾಮೂರ್ತಿ ಅವರು ಕಟ್ಟಿ ಬೆಳೆಸಿದ ಇನ್ಫೋಸಿಸ್ ವಿಶ್ವ ವಿಖ್ಯಾತವಾಗಿದೆ

ಮನೆ ಕೆಲಸಕ್ಕೆ ಮಾತ್ರ ಸೀಮಿತಳಲ್ಲ

ಸಾಂಪ್ರದಾಯಿಕವಾಗಿ ಮನೆಗೆಲಸ ಹಾಗೂ ಮಕ್ಕಳ ಪಾಲನೆ ಕೇವಲ ಮಹಿಳೆಯ ಜವಾಬ್ದಾರಿ ಎಂದೇ ಭಾವಿಸಲಾಗಿತ್ತು. ಆದರೆ, ಯಶಸ್ವಿ ಮಹಿಳೆಯ ಪತಿಯು ಈ ಹಳೆಯ ಚಿಂತನೆಗಳನ್ನು ಬದಿಗಿಟ್ಟು, ಗೃಹಕೃತ್ಯಗಳಲ್ಲಿ ಸಮಾನವಾಗಿ ಭಾಗಿಯಾಗುತ್ತಾನೆ. ಪತ್ನಿ ಕಚೇರಿಯ ಕೆಲಸದಲ್ಲಿ ನಿರತಳಾಗಿದ್ದಾಗ ಅಡುಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು ಅಥವಾ ದಿನಸಿ ತರುವುದು ಮುಂತಾದ ಜವಾಬ್ದಾರಿಗಳನ್ನು ಹಂಚಿಕೊಳ್ಳುವ ಮೂಲಕ ಆಕೆಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ದೊಡ್ಡ ಆನೆಬಲ ನೀಡುತ್ತಾನೆ.

ಮಾರ್ಗದರ್ಶನ ಸಹ ನೀಡುವ ಗುರು

ವೃತ್ತಿಜೀವನದಲ್ಲಿ ಸವಾಲುಗಳು, ಒತ್ತಡಗಳು ಎದುರಾದಾಗ ಮಹಿಳೆಗೆ ಮಾನಸಿಕ ಧೈರ್ಯ ತುಂಬುವ ಮೊದಲ ವ್ಯಕ್ತಿ ಪತಿಯೇ ಆಗಿರುತ್ತಾನೆ. ಆಕೆಯ ಸೋಲು–ಗೆಲುವಿನ ಹಾದಿಯಲ್ಲಿ ಜೊತೆಯಾಗಿ ನಿಂತು, ಆಕೆಯ ಆಲೋಚನೆಗಳನ್ನು ಆಲಿಸಿ, ಸೂಕ್ತವಾದ ಕಾರ್ಯತಂತ್ರದ ಸಲಹೆಗಳನ್ನು ನೀಡುವ ಮೂಲಕ ಪತಿಯು ಉತ್ತಮ ಮಾರ್ಗದರ್ಶಕನಾಗಿ ಕಾರ್ಯನಿರ್ವಹಿಸುತ್ತಾನೆ. ಪತಿಯು ನೀಡುವ ಈ ಭಾವನಾತ್ಮಕ ರಕ್ಷಣೆ ಆಕೆಯ ಆತ್ಮವಿಶ್ವಾಸವನ್ನು ದುಪ್ಪಟ್ಟುಗೊಳಿಸುತ್ತದೆ.

ಸಾಮಾಜಿಕ ಸ್ವಾತಂತ್ರ್ಯ ನೀಡುವುದು




ಮಹಿಳೆಯರು ಸಮಾಜದಲ್ಲಿ ಅಥವಾ ವೃತ್ತಿ ರಂಗದಲ್ಲಿ ಬೆಳೆಯುತ್ತಿರುವಾಗ ಕೆಲವೊಮ್ಮೆ ಕೌಟುಂಬಿಕ ವಲಯದಿಂದ ಅಥವಾ ಸಮಾಜದಿಂದ ಟೀಕೆಗಳು, ಒತ್ತಡಗಳು ಬರುವುದು ಸಹಜ. ಇಂತಹ ಸಂದರ್ಭಗಳಲ್ಲಿ ಪತಿಯು ಪತ್ನಿಯ ಪರವಾಗಿ ನಿಂತು, ಆಕೆಗೆ ಯಾವುದೇ ನಕಾರಾತ್ಮಕ ವಿಚಾರಗಳು ತಟ್ಟದಂತೆ ರಕ್ಷಿಸುತ್ತಾನೆ. ಕೌಟುಂಬಿಕ ಕಾರ್ಯಕ್ರಮಗಳು ಅಥವಾ ಸಮಾಜದ ನಿರೀಕ್ಷೆಗಳನ್ನು ತಾನೇ ನಿಭಾಯಿಸಿ ಪತ್ನಿಯ ವೃತ್ತಿಪರ ಬೆಳವಣಿಗೆಗೆ ಮುಕ್ತ ವಾತಾವರಣ ನಿರ್ಮಿಸಿಕೊಡುತ್ತಾನೆ.

ವೃತ್ತಿಗೆ ಬೆಂಬಲ ನೀಡುವುದು



ಒಳ್ಳೆಯ ಸಂಗಾತಿಯು ಪತ್ನಿಯ ಕನಸುಗಳನ್ನು ತನ್ನದೇ ಕನಸುಗಳಾಗಿ ಕಾಣುತ್ತಾನೆ. ಉನ್ನತ ಶಿಕ್ಷಣ ಪಡೆಯಲು, ಹೊಸ ಉದ್ಯಮವನ್ನು ಪ್ರಾರಂಭಿಸಲು ಅಥವಾ ವೃತ್ತಿಯ ನಿಮಿತ್ತ ಬೇರೆ ನಗರಗಳಿಗೆ ಸ್ಥಳಾಂತರಗೊಳ್ಳಬೇಕಾಗಿ ಬಂದಾಗ ಪತಿಯು ಸ್ವಾರ್ಥವಿಲ್ಲದೆ ಆಕೆಯನ್ನು ಬೆಂಬಲಿಸುತ್ತಾನೆ. ಆಕೆಯ ಯಶಸ್ಸನ್ನು ಕಂಡು ಹೆಮ್ಮೆ ಪಡುತ್ತಾನೆ ಹಾಗೂ ಆಕೆಯ ರೆಕ್ಕೆಗಳಿಗೆ ಇನ್ನಷ್ಟು ಹಾರಲು ಶಕ್ತಿ ತುಂಬುತ್ತಾನೆ.

ದಾಂಪತ್ಯ ಎನ್ನುವುದು ಸ್ಪರ್ಧೆಯಲ್ಲ, ಅದೊಂದು ಸುಂದರ ಸಹಭಾಗಿತ್ವ. ಒಬ್ಬ ಪುರುಷನು ತನ್ನ ಅಹಂಕಾರವನ್ನು ಬದಿಗಿಟ್ಟು ಪತ್ನಿಯ ಯಶಸ್ಸಿನಲ್ಲಿ ಪಾಲುದಾರನಾದಾಗ ಮಾತ್ರ ಆಕೆ ಸಮಾಜದಲ್ಲಿ ಯಶಸ್ವಿ ಮಹಿಳೆಯಾಗಿ ಹೊರಹೊಮ್ಮಲು ಸಾಧ್ಯ. ಹೀಗಾಗಿ, ಪ್ರತಿ ಯಶಸ್ವೀ ಮಹಿಳೆಯ ಹಿಂದೆ ಆಕೆಯನ್ನು ಗೌರವಿಸುವ, ಪ್ರೀತಿಸುವ ಮತ್ತು ಆಕೆಯ ರೆಕ್ಕೆಗಳನ್ನು ಕತ್ತರಿಸದೆ ಹಾರಲು ಬಿಡುವ ಒಬ್ಬ ಉತ್ತಮ ಪತಿಯ ಬೆಂಬಲ ಖಂಡಿತವಾಗಿಯೂ ಇರುತ್ತದೆ.

ಪತಿಯ ಮರಣದ ನಂತರವೂ ಸಹಿತ ಮಿಡಿಯುವ ಜೀವ ಎಂದು ಹೇಳಬಹುದು. ಇದಕ್ಕೆ ಸಾಕ್ಷಿ ವೀರ ಯೋಧನ ಪತ್ನಿಯಾದಂತಹ ನಮ್ಮ ನೂತನ ರಾಜ್ಯಪಾಲರಾದ ಸುಧಾ ಯಾದವ್ ಮೇಡಂ ಅವರು..




ಲೇಖನ
– ಶಿಲ್ಪಾ. ಮೃತ್ಯುಂಜಯ.
ಮಿಣಜಗಿ.
ಧಾರವಾಡ





# 36 ವರ್ಷಗಳ ಪರಂಪರೆಗೆ ಸಾಕ್ಷಿಯಾದ ಆದಿಶಕ್ತಿ ಯುವಕ ಮಂಡಳ

## ಕೊಲ್ಹಾರದಲ್ಲಿ ನವರಾತ್ರಿ ವೈಭವ । ಭಕ್ತಿ ಸಂಭ್ರಮಕ್ಕೆ ಮೆರಗು ನೀಡಿದ ಕಲಾ ತಂಡಗಳು

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ನಾಡಿನಾದ್ಯಂತ ಶಕ್ತಿ ಆರಾಧನೆಯ ಪವಿತ್ರ ಹಬ್ಬ ನವರಾತ್ರಿ ಉತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಗುತ್ತಿದ್ದು, ಕೊಲ್ಹಾರ ಪಟ್ಟಣದಲ್ಲಿಯೂ ಆದಿಶಕ್ತಿ ಯುವಕ ಮಂಡಳದ ವತಿಯಿಂದ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಮೈಸೂರು ದಸರೆಯ ವೈಭವವನ್ನು ಉತ್ತರ ಕರ್ನಾಟಕದ ಕೆನೆಮೊಸರಿನ ನಾಡು ಕೊಲ್ಹಾರದಲ್ಲಿಯೂ ಕಣ್ತುಂಬಿಕೊಳ್ಳುವಂತೆ ದೇವಿಯ ಪ್ರತಿಷ್ಠಾಪನೆ, ಧಾರ್ಮಿಕ ವಿಧಿವಿಧಾನಗಳು ಹಾಗೂ ವಿವಿಧ ಕಲಾ ತಂಡಗಳ ಪ್ರದರ್ಶನಗಳು ಉತ್ಸವಕ್ಕೆ ವಿಶೇಷ ಮೆರುಗು ನೀಡಿವೆ.

ನವರಾತ್ರಿಯ ಮೊದಲ ದಿನವಾದ ಶನಿವಾರ, ಪಟ್ಟಣದ ಅಗಸಿ ಸಮೀಪದ ದ್ಯಾಮವ್ವದೇವಿ ದೇವಸ್ಥಾನದ ಮುಂಭಾಗದಲ್ಲಿ ಶಕ್ತಿ ದೇವತೆಯ ಪ್ರತಿಷ್ಠಾಪನೆ ನೆರವೇರಿಸಲಾಯಿತು. ಮನಗೂಳಿಯ ವೇದಮೂರ್ತಿ ಶಾಂತಯ್ಯ ಲಟಕಿಮಠ ಅವರ ತಂಡದವರಿಂದ ವೇದಮಂತ್ರಗಳ ಪಠಣದೊಂದಿಗೆ ಸರ್ವಧರ್ಮೀಯರ ಸಮ್ಮುಖದಲ್ಲಿ ಧಾರ್ಮಿಕ ವಿಧಿವಿಧಾನಗಳು ಜರುಗಿದವು. ದೇವಿಯ ಮೊದಲ ದಿನದ ಶೈಲಪುತ್ರಿ ಅವತಾರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ದಿಗಂಬರೇಶ್ವರಮಠದಿಂದ ಆರಂಭವಾದ ದೇವಿಯ ಮೆರವಣಿಗೆಯಲ್ಲಿ ಪಟ್ಟಣದ ರಾಜಕೀಯ ಮುಖಂಡರು, ಗಣ್ಯರು, ವಿವಿಧ ಸಮಾಜಗಳ ಮುಖಂಡರು, ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಹಿಳೆಯರು ಹಾಗೂ ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮಂಗಳೂರಿನ ಚಂಡಿವಾದ್ಯ ಮೇಳ, ರನ್ನ ಬೆಳಗಲಿಯ ಝಾಂಜ್ ತಂಡ, ಅಥಣಿ ಪಟ್ಟಣದ ಕರಬಲ್, ಟಕ್ಕಳಕಿ ಗ್ರಾಮದ ಡೊಳ್ಳಿನ ತಂಡ ಸೇರಿದಂತೆ ವಿವಿಧ ಕಲಾ ತಂಡಗಳ ನೃತ್ಯ ಮತ್ತು ವಾದ್ಯ ಪ್ರದರ್ಶನಗಳು ಮೆರವಣಿಗೆಯ ಆಕರ್ಷಣೆಯಾಗಿದ್ದವು. ಕಲಾವಿದರ ಲಯಬದ್ಧ ಪ್ರದರ್ಶನಕ್ಕೆ ಜನರು ಮನಸೋತರು. ಭಕ್ತಿಯ ಘೋಷಣೆಗಳು ಹಾಗೂ ವಾದ್ಯಗಳ ನಾದದ ನಡುವೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆ ನವರಾತ್ರಿ ಸಂಭ್ರಮವನ್ನು ಇಮ್ಮಡಿಗೊಳಿಸಿತು.

ನವದುರ್ಗೆಯ ಆರಾಧನೆ: ನವರಾತ್ರಿಯ ಒಂಬತ್ತು ದಿನಗಳಲ್ಲಿ ಕ್ರಮವಾಗಿ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತೆ, ಕಾತ್ಯಾಯನಿ, ಕಾಲರಾತ್ರಿ, ಮಹಾಗೌರಿ ಹಾಗೂ ಸಿದ್ಧಿಧಾತ್ರಿ ಅವತಾರಗಳಲ್ಲಿ ದೇವಿಯನ್ನು ಆರಾಧಿಸಲಾಗುತ್ತದೆ. ಉತ್ಸವದ ಅಂಗವಾಗಿ ಬೆಳಗ್ಗೆ ಮತ್ತು ರಾತ್ರಿ ವಿಶೇಷ ಪೂಜೆಗಳು ನಡೆಯಲಿವೆ. ದೇವಿಯ ಒಂಬತ್ತು ಅವತಾರಗಳ ಚಿತ್ರಗಳು, ಝಗಮಗಿಸುವ ವಿದ್ಯುತ್ ಅಲಂಕಾರ ಹಾಗೂ ಮಧ್ಯಭಾಗದಲ್ಲಿ ಅಲಂಕರಿಸಿರುವ ಕಂಚು ಮತ್ತು ಬೆಳ್ಳಿಯ ದೇವಿಯ ಮೂರ್ತಿ ಭಕ್ತರನ್ನು ಆಕರ್ಷಿಸುತ್ತಿವೆ. ಭಕ್ತರ ಸಂಕಲ್ಪದೊಂದಿಗೆ ದೇವಿಯ ಆರಾಧನೆ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಅನ್ನಸಂತರ್ಪಣೆ ಒಂಬತ್ತು ದಿನಗಳ ಕಾಲ ನಡೆಯಲಿವೆ.

ಆದಿಶಕ್ತಿ ಯುವಕ ಮಂಡಳದ ಅಧ್ಯಕ್ಷ ಶಶಿಧರ ದೇಸಾಯಿ ಮಾತನಾಡಿ, “ಕಳೆದ 36 ವರ್ಷಗಳಿಂದ ಪಟ್ಟಣದಲ್ಲಿ ದೇವಿಯ ಪ್ರತಿಷ್ಠಾಪನೆ ಮಾಡುತ್ತಾ ಬಂದಿದ್ದೇವೆ. ಸ್ಥಳೀಯ ನಾಗರಿಕರ ಸಹಕಾರ, ಗಣ್ಯರ ನೆರವು ಹಾಗೂ ಮಠಾಧೀಶರ ಪ್ರೇರಣೆಯಿಂದ ಪ್ರತಿವರ್ಷ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಕೊಲ್ಹಾರ ಸೇರಿದಂತೆ ನಾಡಿನ ಜನರ ಕಷ್ಟ–ಕಾರ್ಪಣ್ಯಗಳನ್ನು ನಿವಾರಿಸಿ, ಬರದ ಭೀತಿ ದೂರವಾಗಿ ಕೃಷ್ಣಾ ನದಿ ಸದಾ ತುಂಬಿ ಹರಿಯುವಂತಾಗಲಿ. ದೇವಿಯು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸಿ ಸರ್ವರಿಗೂ ಅನುಗ್ರಹಿಸಲಿ ಎಂಬುದು ನಮ್ಮ ಪ್ರಾರ್ಥನೆ,” ಎಂದು ಹೇಳಿದರು.

# ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಜೀವನಾಧಾರಿತ ನಾಟಕಕ್ಕೆ ಸಿದ್ಧತೆ । ಶಾಸಕ ಶಿವಾನಂದ ಪಾಟೀಲರಿಂದ ಉದ್ಘಾಟನೆ

## ಮುಳವಾಡದಲ್ಲಿ ಅ.16ರಂದು ‘ಬಯಲು ಬಯಲಾಯಿತು’ ನಾಟಕ ಪ್ರದರ್ಶನ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ತಾಲೂಕಿನ ಮುಳವಾಡ ಗ್ರಾಮದಲ್ಲಿ ಶ್ರೀ ಸತ್ಯಸಾಯಿಬಾಬಾ ಯುವಕ ಸೇವಾ ಸಂಘದ ವತಿಯಿಂದ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಜೀವನಾಧಾರಿತ ‘ಬಯಲು ಬಯಲಾಯಿತ್ತು’ ನಾಟಕ ಪ್ರದರ್ಶನವನ್ನು ಅಕ್ಟೋಬರ್ 16ರಂದು ಶುಕ್ರವಾರ ಸಂಜೆ 7.45ಕ್ಕೆ ಗ್ರಾಮದ ಶ್ರೀ ಸತ್ಯಸಾಯಿಬಾಬಾ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸರಳತೆ, ವೈರಾಗ್ಯ, ಮಾನವೀಯ ಮೌಲ್ಯಗಳು ಹಾಗೂ ಆಧ್ಯಾತ್ಮಿಕ ಚಿಂತನೆಗಳ ಮೂಲಕ ಜನಮಾನಸದಲ್ಲಿ ಅಚ್ಚಳಿಯದ ಛಾಪು ಮೂಡಿಸಿರುವ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಬದುಕು ಮತ್ತು ಸಂದೇಶವನ್ನು ರಂಗಭೂಮಿಯ ಮೂಲಕ ಪರಿಚಯಿಸುವ ಉದ್ದೇಶದಿಂದ ನಾಟಕ ಆಯೋಜಿಸಲಾಗಿದೆ.

ಬನಹಟ್ಟಿಯ ವಾತ್ಸಲ್ಯ ವಿಚಾರ ವೇದಿಕೆ ನಾಟಕವನ್ನು ಪ್ರಸ್ತುತಪಡಿಸಲಿದ್ದು, ಪ್ರೊ. ಬಿ.ಆರ್. ಪೋಲಿಸ್ ಪಾಟೀಲ ರಚಿಸಿದ್ದಾರೆ. ವೈ.ಡಿ. ಬಾದಾಮಿ ನಿರ್ದೇಶನದ ಜವಾಬ್ದಾರಿ ವಹಿಸಿದ್ದು, ಸಾಣೇಹಳ್ಳಿಯ ಮಂಜುಳಾ ಅವರೂ ನಾಟಕ ಪ್ರಸ್ತುತಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮನಗೂಳಿ ಹಿರೇಮಠದ ಶ್ರೀ ಅಭಿನವ ಸಂಗನಬಸವ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸಲಿದ್ದು, ಎಸ್.ಆರ್. ಪಾಟೀಲ ಅಧ್ಯಕ್ಷತೆ ವಹಿಸುವರು.



ಶಾಸಕ ಶಿವಾನಂದ ಎಸ್. ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಜ್ಯೋತಿ ಬೆಳಗಿಸುವರು. ಈರಣ್ಣ ಪಟ್ಟಣಶೆಟ್ಟಿ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವರು. ಮುಖ್ಯ ಅತಿಥಿಗಳಾಗಿ ಕೆ.ಎಸ್. ದೇಸಾಯಿ, ಯಂಕನಗೌಡ ಎಂ. ಪಾಟೀಲ, ಬಸವರಾಜ ಪಿ. ಕೆಂಗನಾಳ, ಬಸವರಾಜ ಕೆ. ಪಾಟೀಲ, ಅಶೋಕ ಗು. ಕಳಸಗೊಂಡ, ಬಾಬು ನಿಂ. ಕಾರಜೋಳ, ಬಸಲಿಂಗಪ್ಪ ಗೊಳಸಂಗಿ, ಅಣ್ಣಪ್ಪ ಐಹೊಳ್ಳಿ, ಬಸವರಾಜ ಕಲ್ಯಾಣಶೆಟ್ಟಿ, ಮಹಾದೇವ ಮಮದಾಪೂರ, ಸಂಗಮೇಶ ಹಂಚಿನಾಳ ಹಾಗೂ ಮಹಾಂತೇಶ ಹೂಗೊಡಿ ಭಾಗವಹಿಸಲಿದ್ದಾರೆ. ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಜೀವನದ ಆದರ್ಶಗಳು ಹಾಗೂ ತಾತ್ವಿಕ ಸಂದೇಶಗಳನ್ನು ಸಾರುವ ಈ ನಾಟಕ ಪ್ರದರ್ಶನಕ್ಕೆ ಮುಳವಾಡ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಶ್ರೀ ಸತ್ಯಸಾಯಿಬಾಬಾ ಯುವಕ ಸೇವಾ ಸಂಘದ ಸದಸ್ಯರು ಮನವಿ ಮಾಡಿದ್ದಾರೆ.




# 371 (ಜೆ) ಹೋರಾಟ ಜನಾಂದೋಲನವಾಗಬೇಕು :ಮನಗೂಳಿ

ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಸಿಂದಗಿಯಿಂದ ಆರಂಭವಾಗಿರುವ ಹೋರಾಟ ಜಿಲ್ಲೆಯ ಪ್ರತಿಯೊಂದು ಹೋಬಳಿ ಮಟ್ಟಕ್ಕೂ ವಿಸ್ತರಿಸಿ ಜನಾಂದೋಲನವಾಗಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ ಹೇಳಿದರು. ನಗರದ ಬಸವೇಶ್ವರ ವೃತ್ತದ ಬಳಿ ಗೋಕಾಕ ಚಳವಳಿಯ ರೂವಾರಿ ರೇ.ಚ.ರೇವಡಿಗಾರ ಪ್ರತಿಷ್ಠಾನ ಹಾಗೂ 371(ಜೆ) ಹೋರಾಟ ಸಮಿತಿಯ ನೇತೃತ್ವದಲ್ಲಿ 10ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ದಲಿತ ಸಂಘರ್ಷ ಸಮಿತಿ (ನಾಗವಾರ ಬಣ), ಮೆಡಿಕಲ್ ಅಸೋಸಿಯೇಷನ್, ಲ್ಯಾಬ್ ಟೆಕ್ನಿಷಿಯನ್ ಸಂಘ, ಲಯನ್ಸ್ ಕ್ಲಬ್, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳು ಹಾಗೂ ಸಾಸಾಬಾಳ, ಮಾಡಬಾಳ ಗ್ರಾಮದ ಗಣ್ಯರು ಬೆಂಬಲ ವ್ಯಕ್ತಪಡಿಸಿದ ಸಂದರ್ಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸರ್ಕಾರಕ್ಕೆ ಅಗತ್ಯವಿರುವ ಎಲ್ಲ ಮಾಹಿತಿಗಳನ್ನು ಒದಗಿಸಲು ಹೋರಾಟಗಾರರು ಸಿದ್ಧರಿರಬೇಕು. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ವಿಜಯಪುರ ಜಿಲ್ಲೆಯನ್ನು 371(ಜೆ) ಕಲಂ ವ್ಯಾಪ್ತಿಗೆ ಸೇರಿಸಬೇಕು. ಈ ಭಾಗದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸಾಸಾಬಾಳದ ನಿವೃತ್ತ ಶಿಕ್ಷಕ ಬಾಬುಗೌಡ ಬಿರಾದಾರ ಮಾತನಾಡಿದರು. ಪ್ರಾಧ್ಯಾಪಕ ಐ.ಬಿ.ಬಿರಾದಾರ, ಕೆ.ಎಚ್.ಸೋಮಾಪುರ, ದಸಂಸ ಸಂಚಾಲಕ ಪರಶುರಾಮ ಕಾಂಬಳೆ, ಅಣ್ಣಾರಾಯ ಈಳಗೇರ, ಶಬ್ಬೀರ ಪಟೇಲ ಬಿರಾದಾರ, ಮಾಡಬಾಳದ ಎಸ್.ಎಸ್.ಪೂಜಾರಿ, ಭೀಮಾಶಂಕರ ಅಗಸರ, ಮಂಜುನಾಥ ಬಿಜಾಪುರ, ಶಾಂತು ಕುಂಬಾರ, ಸುನೀಲ ಬಜಂತ್ರಿ ಹಾಗೂ ವಕೀಲ ಡಿ.ಎ. ಚನ್ನಗೊಂಡ ಸೇರಿದಂತೆ ಹಲವರು ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಈ ಸಂದರ್ಭದಲ್ಲಿ ರಂಗನಾಥ ಥೋರ್ಪೆ, ರಾಚಪ್ಪ ವಾರದ, ಎಸ್.ಬಿ.ಚಾಗಶೆಟ್ಟಿ, ಡಾ.ಅಂಬರೀಶ ಬಿರಾದಾರ, ಪ್ರಕಾಶ ಕಟ್ಟಿಮನಿ, ಅರ್ಜುಣ ರೆಬಿನಾಳ, ಗುರುರಾಜ ಬಗಲಿ, ಮಾನಸಿದ್ಧ ನಾಯ್ಕೋಡಿ, ರಾಜು ಹೊಳಕುಂದಿ, ಶರಣಪ್ಪ ಹರಿಜನ್, ಸಿದ್ದಣ್ಣ ಬಿರಾದಾರ, ಎಸ್.ಆರ್.ಪಾಟೀಲ, ಸಿದ್ದು ಕಡಗಂಚಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಸಂಸದೀಯ ಕಾರ್ಯಕಲಾಪಗಳ ಕುರಿತು ಅರಿಯಬೇಕು

ಉದಯರಶ್ಮಿ ದಿನಪತ್ರಿಕೆ




ಸಿಂದಗಿ: ವಿದ್ಯಾರ್ಥಿಗಳು ಪುಸ್ತಕದ ಜ್ಞಾನದ ಜೊತೆಗೆ ಪ್ರಾಯೋಗಿಕವಾಗಿ ಕಲಿತಾಗ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಶಾಲಾ-ಕಾಲೇಜು ಹಂತದಲ್ಲಿಯೇ ವಿಧೇಯಕ ಮಂಡನೆ, ಸಭಾತ್ಯಾಗ, ಶೂನ್ಯ ವೇಳೆಯಲ್ಲಿ ಪ್ರತಿಭಟನೆ ಹಾಗೂ ಚುಕ್ಕೆ ಗುರುತಿನ ಪ್ರಶ್ನೆಗಳ ಮಂಡನೆ ಸೇರಿದಂತೆ ಸಂಸದೀಯ ಕಾರ್ಯಕಲಾಪಗಳ ಕುರಿತು ಹೆಚ್ಚಿನ ಜ್ಞಾನ ಬೆಳೆಸಿಕೊಳ್ಳಬೇಕು ಎಂದು ಶಾಸಕ ಅಶೋಕ ಮನಗೂಳಿ ಸಲಹೆ ನೀಡಿದರು.

ಸಿಂದಗಿ ನಗರದ ಮಾಂಗಲ್ಯ ಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಯುವ ಸಂಸತ್ತು ಅಧಿವೇಶನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದ ಆದೇಶದ ಮೇರೆಗೆ ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಪರಿಕಲ್ಪನೆ ಹಾಗೂ ಶಾಸಕಾಂಗದ ಕಾರ್ಯವೈಖರಿಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಯುವ ಸಂಸತ್ತು ಕಾರ್ಯಕ್ರಮ ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ನಡೆಸಿಕೊಟ್ಟ ಈ ಅಣಕು ಅಧಿವೇಶನ ಇಡೀ ರಾಜ್ಯಕ್ಕೆ ಮಾದರಿಯಾಗುವಂತಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಸಂಸದೀಯ ಪಟುಗಳಾಗಿ ಹೊರಹೊಮ್ಮಬೇಕು. ಜನಸೇವೆಯೇ ನಮ್ಮ ಮುಖ್ಯ ಗುರಿಯಾಗಿದ್ದು, ಜನಪ್ರತಿನಿಧಿಗಳು ಯಾವುದೇ ಸ್ವಾರ್ಥವಿಲ್ಲದೆ ನಿಸ್ವಾರ್ಥವಾಗಿ ಜನರ ಸೇವೆ ಮಾಡಬೇಕು ಎಂದರು.

ಈ ವೇಳೆ ತಹಶೀಲ್ದಾರ್ ಕರೆಪ್ಪ ಬೆಳ್ಳಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸುವ ಉದ್ದೇಶದಿಂದ ಯುವ ಸಂಸತ್ತು ಆಯೋಜಿಸಲಾಗಿದೆ. ತಾಲೂಕ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡಿದ 36 ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು ಎಂದರು.

ಅಧಿವೇಶನದಲ್ಲಿ ಪ್ರೌಢಶಾಲೆ, ಪದವಿ-ಪೂರ್ವ ಹಾಗೂ ಪದವಿ ಹಂತದ 224 ವಿದ್ಯಾರ್ಥಿಗಳು ಭಾಗವಹಿಸಿ, ಸಭಾಧ್ಯಕ್ಷರು, ಸಚಿವರು, ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರ ಪಾತ್ರಗಳನ್ನು ನಿರ್ವಹಿಸುವ ಮೂಲಕ ಸಂಸದೀಯ ಕಾರ್ಯಕಲಾಪಗಳನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿದರು. ಎಲ್ಲ ವಿದ್ಯಾರ್ಥಿಗಳಿಗೂ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಸೂಕ್ತ ಅವಕಾಶ ಕಲ್ಪಿಸಲಾಯಿತು.

ನಿರುದ್ಯೋಗ ಸಮಸ್ಯೆ, ನಗರಾಭಿವೃದ್ಧಿ, ಶಿಕ್ಷಣ ವ್ಯವಸ್ಥೆ, ಗ್ರಾಮೀಣ ಕುಡಿಯುವ ನೀರಿನ ಪೂರೈಕೆ, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಿತಿಗತಿ, ಜಲಜೀವನ ಮಿಷನ್ ಯೋಜನೆ, ಕಾಲುವೆಗಳಿಗೆ ನೀರು ಪೂರೈಕೆ, ಬರಗಾಲ ನಿರ್ವಹಣೆ, ಸೈಬರ್ ಅಪರಾಧ ಹಾಗೂ ರೈತರ ಸಮಸ್ಯೆಗಳು ಸೇರಿದಂತೆ ಹಲವು ಪ್ರಚಲಿತ ವಿಷಯಗಳ ಕುರಿತು ವಿದ್ಯಾರ್ಥಿಗಳು ನಡೆಸಿದ ಚರ್ಚೆಗಳು ಗಮನ ಸೆಳೆದವು. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಸ್.ಬಿ.ಪಾಟೀಲ ಗುಂದಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಪಂ ಇಒ ಅನಿಲ ಹಳ್ಳಿ, ಬಿಇಒ ಟಿ.ಎಸ್.ಆಲಗೂರ, ಎ.ಆರ್.ಹೆಗ್ಗನದೊಡ್ಡಿ, ಬಿ.ಎಂ. ಮಾಸ್ತಿ, ನೌಕರರ ಸಂಘದ ಅಧ್ಯಕ್ಷ ಅಶೋಕ ತೆಲ್ಲೂರ, ಎಸ್.ಎಸ್.ಹಳಿಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಬಾಗೇಶ ಹೂಗಾರ ಪ್ರಾರ್ಥಿಸಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಭವಾನಿ ಪಾಟೀಲ ಸ್ವಾಗತಿಸಿದರು. ಆರ್.ಎಸ್. ಗಾಯಕವಾಡ ನಿರೂಪಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಟಿ. ಎಸ್.ಆಲಗೂರ ನಿರೂಪಿಸಿದರು.

**ಸಿಂದಗಿ ಮತ್ತು ಆಲಮೇಲ ತಾಲೂಕು ಮಟ್ಟದ ಯುವ ಸಂಸತ್ತು 2026-27ರ ಯುವ ಸಂಸತ್ತು ಅಧಿವೇಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಅಶೋಕ ಮನಗೂಳಿ ಸಲಹೆ**

# ಚಡಚಣ ಪಪಂ ಸಿಬ್ಬಂದಿಯಿಂದಲೇ ಪರಿಸರಕ್ಕೆ ಕಂಟಕ!

## ಎಲ್ಲೆಂದರಲ್ಲಿ ರಸ್ತೆಯ ಮೇಲೆ ಕಸ, ಪ್ಲಾಸ್ಟಿಕ್ ಸುಟ್ಟು ಪ.ಪಂ. ಸಿಬ್ಬಂದಿ ಬೇಜವಾಬ್ದಾರಿ । ವ್ಯಾಪಾರಿಗಳಿಗೆ, ಪಾದಚಾರಿಗಳಿಗೆ ತೊಂದರೆ

ಉದಯರಶ್ಮಿ ದಿನಪತ್ರಿಕೆ



ಚಡಚಣ: ಪಟ್ಟಣ ಪಂಚಾಯತ್ ಕೆಲಸಗಾರರು ವಿವಿಧೆಡೆಯಿಂದ ಸಂಗ್ರಹಿಸಿದ ಕಸವನ್ನು ಕಸ ವಿಲೇವಾರಿ ವಾಹನದಲ್ಲಿ ಸಾಗಿಸಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವ ಬದಲು, ಮೇತ್ರಿ ಸೈಕಲ್ ಅಂಗಡಿಯ ಮುಂಭಾಗದಲ್ಲಿ ಹಾಗೂ ವಿವಿದೆಡೆ ರಸ್ತೆಯ ಮೇಲೆ ಕಸ ಹಾಗೂ ಪ್ಲಾಸ್ಟಿಕ್ ಒಂದುಗೂಡಿಸಿ ವಿವಿಧ ತ್ಯಾಜ್ಯಗಳಿಗೆ ಬೆಂಕಿ ಹಚ್ಚಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕಸ ಹಾಗೂ ಪ್ಲಾಸ್ಟಿಕ್ ಸಂಪೂರ್ಣವಾಗಿ ಸುಡದೆ ಉಳಿದಿರುವುದರಿಂದ ಹೊಗೆ, ಬೂದಿ ಮತ್ತು ಕಸದ ತುಣುಕುಗಳು ಗಾಳಿಗೆ ಹಾರಿ ಅಂಗಡಿಯ ಒಳಗೆ ಮತ್ತು ರಸ್ತೆಯ ಮೇಲೆ ಬರುತ್ತಿವೆ. ಪ್ಲಾಸ್ಟಿಕ್ ಸುಡುವುದರಿಂದ ದಟ್ಟ ಹೊಗೆ ಹಾಗೂ ದುರ್ವಾಸನೆ ಹರಡುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇದರಿಂದ ಪರಿಸರ ಮಾಲಿನ್ಯದ ಜೊತೆಗೆ ಸಾರ್ವಜನಿಕರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಆತಂಕ ಎದುರಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಿ, ಕಸವನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕಾದ ಪಂಚಾಯತ್ ಸಿಬ್ಬಂದಿಯೇ ಎಲ್ಲೆಂದರಲ್ಲಿ ರಸ್ತೆಯ ಮೇಲೆ ಕಸ ಮತ್ತು ಪ್ಲಾಸ್ಟಿಕ್ ತಂದು ಸುಡುವುದು ಎಷ್ಟು ಸರಿ ಎಂಬ ಪ್ರಶ್ನೆ ಮೂಡಿದೆ. ಸ್ವಚ್ಛತೆಯ ಜವಾಬ್ದಾರಿ ಹೊಂದಿರುವ ಸಿಬ್ಬಂದಿಯೇ ಈ ರೀತಿ ಬೇಕಾಬಿಟ್ಟಿಯಾಗಿ ವರ್ತಿಸಿದರೆ ಸಾರ್ವಜನಿಕರು ಯಾರನ್ನು ಪ್ರಶ್ನಿಸಬೇಕು ಎಂಬ ಅಸಮಾಧಾನ ಸ್ಥಳೀಯರಲ್ಲಿ ವ್ಯಕ್ತವಾಗಿದೆ.

ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ಜವಾಬ್ದಾರಿ ಹೊಂದಿರುವ ಪಂಚಾಯತ್ ಸಿಬ್ಬಂದಿಯೇ ಈ ರೀತಿ ಬೇಕಾಬಿಟ್ಟಿಯಾಗಿ ಕಸ ಸುಡುವುದು ಎಷ್ಟು ಸರಿ ಎಂಬ ಪ್ರಶ್ನೆ ಮೂಡಿದೆ.

ಪ್ಲಾಸ್ಟಿಕ್ ತ್ಯಾಜ್ಯವನ್ನು ಬಹಿರಂಗವಾಗಿ ಸುಡುವುದರಿಂದ ಉಂಟಾಗುವ ಹೊಗೆ ಪರಿಸರಕ್ಕೆ ಹಾನಿಕಾರಕವಾಗಿದ್ದು, ಇಂತಹ ಕೃತ್ಯಗಳನ್ನು ತಡೆಯುವುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿದೆ.

ಪರಿಸರ ಸ್ವಚ್ಛತೆ ಕಾಪಾಡಬೇಕಾದ ಸಿಬ್ಬಂದಿಯೇ ಪ್ಲಾಸ್ಟಿಕ್ ಸುಟ್ಟು ಮಾಲಿನ್ಯಕ್ಕೆ ಕಾರಣವಾಗುತ್ತಿರುವುದು ವಿಪರ್ಯಾಸ. ಸಂಬಂಧಪಟ್ಟ ಪ.ಪಂ.ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲಿಸಿ, ಕಸ ಮತ್ತು ಪ್ಲಾಸ್ಟಿಕ್ ಸುಡುವುದನ್ನು ತಡೆಯಬೇಕು. ಕಸ ವಿಲೇವಾರಿ ವಾಹನದ ಮೂಲಕ ತ್ಯಾಜ್ಯವನ್ನು ಸೂಕ್ತ ಸ್ಥಳಕ್ಕೆ ಸಾಗಿಸಿ ನಿಯಮಾನುಸಾರ ವಿಲೇವಾರಿ ಮಾಡುವ ವ್ಯವಸ್ಥೆ ಕಲ್ಪಿಸಬೇಕು. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರುವ ಸಿಬ್ಬಂದಿಗೆ ಸೂಕ್ತ ಸೂಚನೆ ನೀಡಿ, ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ವಿಜಯ ಸೈಕಲ್ ಅಂಗಡಿ ಮಾಲೀಕರಾದ ಪ್ರಥಮೇಶ ಮೇತ್ರಿ ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಕೈಗೊಳ್ಳಿ"ಡಾ.ಔದ್ರಾಮ

## ಅ.23ರಂದು ಕಿತ್ತೂರು ಚೆನ್ನಮ್ಮ, ನ.11ರಂದು ಒನಕೆ ಓಬವ್ವ & ನ.27ರಂದು ಕನಕದಾಸ ಜಯಂತಿ ಆಚರಣೆ

ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕಿತ್ತೂರು ರಾಣಿ ಚೆನ್ನಮ್ಮ, ವೀರವನಿತೆ ಒನಕೆ ಓಬವ್ವ ಹಾಗೂ ಕನಕದಾಸರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಸೂಚಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಕ್ಟೋಬರ್ 23ರಂದು

ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ನವೆಂಬರ್ 11ರಂದು ಒನಕೆ ಓಬವ್ವ ಜಯಂತಿ ಹಾಗೂ ನವೆಂಬರ್ 27ರಂದು ಕನಕದಾಸ ಜಯಂತಿಯನ್ನು ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಳಗಿ ಆಚರಿಸಲಾಗುವುದು ಎಂದು ತಿಳಿಸಿದರು.ಅ. 23ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ: ಅಂದು ಬೆಳಿಗ್ಗೆ 9.30ಕ್ಕೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ. ನಂತರ ವೇದಿಕೆ ಕಾರ್ಯಕ್ರಮದ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ನ.11ರಂದು ಒನಕೆ ಓಬವ್ವ ಜಯಂತಿ: ರಂಗಮಂದಿರದಲ್ಲಿ ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ, ವಿಶೇಷ ಉಪನ್ಯಾಸ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅವರ ಅಪ್ರತಿಮ ಸಾಹಸ ಹಾಗೂ ಶೌರ್ಯ ಅವರ ಜೀವನಾದರ್ಶಗಳನ್ನು ತಿಳಿಸಿಕೊಡಲಾಗುವುದು.

ನ.27ರಂದು ಕನಕದಾಸ ಜಯಂತಿ: ಅಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಗೊಂಬೆ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಕನಕದಾಸರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ರಂಗಮಂದಿರದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮ, ವಿಶೇಷ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ರಾಜಶೇಖರ ಧೈವಾಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಅಡಿವೆಪ್ಪ ಸಾಲಗಲ್, ಮಲ್ಲಣ್ಣ, ರಾಜು ಕಗ್ಗೊಡ, ಸತೀಶ್ ಕುಮಾರ್, ಸಿದ್ದು ಧನಗೊಂಡ, ಮಲ್ಲಣ್ಣ ಶಿರಶ್ಯಾಳ, ಸಿದ್ದರಾಮ ಶಿರಶ್ಯಾಡ್, ಭೀಮರಾಯ ಜಿಗಜಿಣಗಿ ಸೇರಿದಂತೆ ವಿವಿಧ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಂಸ್ಕಾರದಿಂದ ಬದುಕಿಗೆ ಬೆಲೆ: ಚಂದ್ರಗುಂಡ ಶಿವಾಚಾರ್ಯರು

ಕಲಬುರಗಿ : ನಗರದ ಅಡ್ವೋಕೇಟ್ ಕಾಲನಿಯಲ್ಲಿರುವ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ ಆಶ್ರಯದಲ್ಲಿ ಶರನ್ನವರಾತ್ರಿಯ ಪರ್ವಕಾಲದ ನಿಮಿತ್ತ ಹಮ್ಮಿಕೊಳ್ಳಲಾಗಿರುವ 10 ದಿನಗಳ ಶ್ರೀ ವರದಾನಿ ಗುಡ್ಡಾಪುರ ದಾನಮ್ಮ ದೇವಿಯ ಪುರಾಣ ಪ್ರವಚನ ಕಾರ್ಯಕ್ರಮವನ್ನು ಪೂಜ್ಯ ಚಂದ್ರಗುಂಡ ಶಿವಾಚಾರ್ಯರು ಉದ್ಘಾಟಿಸಿದರು. ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಆಶೀರ್ವಚನ ನೀಡುತ್ತಾ ಮಾತನಾಡಿದ ಅವರು,ಭಗವಂತನು ಮನುಷ್ಯನಿಗೆ ಶ್ರೇಷ್ಠವಾದ ಕಣ್ಣು, ಕೈ, ಕಾಲು ಮತ್ತು ನಾಲಿಗೆಯನ್ನು ನೀಡಿದ್ದಾನೆ. ಹತ್ತಿಯು ಸಂಸ್ಕಾರಗೊಂಡು ದಾರವಾಗಿ, ಬಟ್ಟೆಯಾದಾಗ ಮಾತ್ರ ಹೇಗೆ ಅದಕ್ಕೆ ಬೆಲೆ ಬರುತ್ತದೆಯೋ, ಹಾಗೆಯೇ ಭಗವಂತನು ನೀಡಿದ ಈ ದೇಹವನ್ನು ಸತ್ಕಾರ್ಯಗಳಿಗೆ ಬಳಸಿದಾಗ ಮಾತ್ರ ಜನ್ಮ ಸಾರ್ಥಕವಾಗುತ್ತದೆ. ಭಗವಂತ ಕೊಟ್ಟ ನಾಲಿಗೆಯನ್ನು ನಿಂದನೆಗೆ ಬಳಸದೆ, ಭಗವಂತನ ನಾಮಸ್ಮರಣೆ ಹಾಗೂ ಮಂತ್ರ ಪಠಣೆಗೆ ಬಳಸಬೇಕು ಎಂದು ಭಕ್ತರಿಗೆ ಕಿವಿಮಾತು ಹೇಳಿದರು.

ದಾನಮ್ಮ ದೇವಿಯ ಮಹಿಮೆಯನ್ನು ವಿವರಿಸಿದ ಶ್ರೀಗಳು, ದೇವಿಯ ಮೂಲ ಹೆಸರು ನಿಂಗಮ್ಮ. ಕಲ್ಯಾಣದಲ್ಲಿ ಪಂಚ ಬ್ರಹ್ಮರಾದ ಬಸವಾದಿ ಶರಣರು, ಅಲ್ಲಮಪ್ರಭು, ಸಿದ್ಧರಾಮ, ಚೆನ್ನಬಸವಣ್ಣ ಹಾಗೂ ಅಕ್ಕಮಹಾದೇವಿಯವರ ಸಮ್ಮುಖದಲ್ಲಿ ಆಕೆಯಲ್ಲಿದ್ದ ದಾನಗುಣವನ್ನು ಮೆಚ್ಚಿ ದಾನಮ್ಮಎಂಬ ಬಿರುದನ್ನು ನೀಡಲಾಯಿತು ಎಂದರು. ಈ ಸಂದರ್ಭದಲ್ಲಿ ಹೊನ್ನ ಕಿರಣಗಿಯ ಪೂಜ್ಯ ಚಂದ್ರಗುಂಡ ಶಿವಾಚಾರ್ಯರು, ಹಾಗೂ ಪುರಾಣಿಕರಾದ ಸಿದ್ಧಲಿಂಗಯ್ಯ ಶಾಸ್ತ್ರಿ, ನರೋಣಾ ಅವರನ್ನು ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ ನ ಪದಾಧಿಕಾರಿಗಳು ಶಾಲು ಹೊದಿಸಿ, ಸ್ಮರಣಿಕೆ ನೀಡಿ, ಗೌರವಿಸಿದರು.

# ನವರಾತ್ರಿ ಉತ್ಸಾಹ: ಶ್ವೇತ ಕಾಂತಿಯಲ್ಲಿ ನಾರಿ ಲೋಕ ವೈಭವ

ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಇಲ್ಲಿ ನವರಾತ್ರಿ ಉತ್ಸವದ ಸಂಭ್ರಮ ಕಳೆಗಟ್ಟಿದೆ. ಶ್ವೇತ ವಸ್ತ್ರಧಾರಣೆಯ ಬ್ರಹ್ಮಚಾರಿಣಿ ರೂಪಾಂಗಣದ ಲಾವಣ್ಯದಲ್ಲಿ ಗುಮ್ಮಟ ನಗರಿಯ ಮಹಿಳಾ ಮಣಿಗಳು ನವರಾತ್ರಿಯ ಎರಡನೇ ದಿನ ಸೋಮವಾರ ಮಿನುಗಿ ಹಬ್ಬದ ಉತ್ಸವಕ್ಕೆ ಮೆರಗಿನ ಲೇಪನ ಸೃಜೀಸಿದ್ದಾರೆ.

ಇಲ್ಲಿನ ರಾಜಾಜಿ ನಗರದ ಅಪಾರ ಮಹಿಳಾ ಸಮೂಹ ಸೋಮವಾರ ನಸುಕಿನಲ್ಲಿಯೇ ಬಿಳಿ ಬಣ್ಣದ ಸೀರೆಯನ್ನುಟ್ಟು ಹಬ್ಬದ ಉತ್ಸಾಹದಲ್ಲಿ ತನ್ಮರಾಗಿ ಶ್ರದ್ಧೆಯಿಂದ ಭಕ್ತಿ ಭಾವ ಮೆರೆದಿದ್ದಾರೆ.ನಸುಕಿನ 3-30 ಗಂಟೆಯ ಮಧ್ಯರಾತ್ರಿಯಿಂದಲೇ ಪವಿತ್ರಭಾವದ ಶುಚಿಯಿಂದ ರಾಜಾಜಿ ನಗರದಲ್ಲಿ ನಾಡದೇವಿ ಮಂದಿರ ಉತ್ಸವ ಟ್ರಸ್ಟ್ ಕಮೀಟಿಯವರು ನವರಾತ್ರಿ ಉತ್ಸವದಂವಾಗಿ ಪ್ರತಿಷ್ಠಾಪಿಸಿರುವ ದೇವಿ ಮಂದಿರಕ್ಕೆ ತೆರಳಿ ಸಂಪ್ರದಾಯ ಬದ್ಧವಾಗಿ ಆದಿಶಕ್ತಿಯನ್ನು ಪೂಜಿಸಿ ದೇವಿಯ ಕೃಪೆಗೆ ಪಾತ್ರರಾಗಿದ್ದಾರೆ.

ನವರಾತ್ರಿಯ ಒಂಬತ್ತು ದಿನಗಳೂ ನವದುಗೆ9ಗೆ ಪ್ರಿಯವಾದ ಬಣ್ಣದ ಸೀರೆಯನ್ನುಟ್ಟು ಭಕ್ತಿಲೋಕದ ಸಂಭ್ರಮ ಇಮ್ಮಡಿಯೊಂದಿಗೆ ಹಂಚಿಕೊಳ್ಳಲು ಇಲ್ಲಿನ ಮಹಿಳೆಯರು ಭಾವಮನ ತೋರಿದ್ದು ಶರನ್ನವರಾತ್ರಿಯ ಉಲ್ಲಾಸೋಮಯದ ಸಡಗರ ಗರಿಗೆದರಿದೆ. ನಾಡಹಬ್ಬ ನವರಾತ್ರಿ ಆಚರಣೆ ಜೊತೆಗೆ ಮನೆಮನಗಳಲ್ಲೂ ದುಗೆ9ಯನ್ನು ಶ್ರದ್ಧೆ, ಭಕ್ತಿಪೂರಕ ಆಚರಿಸಿ ಹಬ್ಬಕ್ಕೆ ವಿಶೇಷ ಮೆರಗು ನೀಡುತ್ತಿದ್ದಾರೆ.

ನಸುಕಿನಲ್ಲೇ ಪೂಜಾ ಕೈಂಕರ್ಯದ ನಾದ ಕಳೆಗಟ್ಟುತ್ತಿದ್ದು ನವರಾತ್ರಿ ಹಬ್ಬದ ಸಾಂಸ್ಕೃತಿಕ ಮಹತ್ವ ಮತ್ತಷ್ಟು ವೈಭವ ಹೆಚ್ಚಿಸಿದೆ. ಆಸಕ್ತಿಯೊಂದಿಗೆ ನಾಡಿನ ಸಂಸ್ಕೃತಿ ಮತ್ತು ಪರಂಪರಗೆ ಒತ್ತು ನೀಡಿ ದುಗಾ9ಮಾತೆಯನ್ನು ಪವಿತ್ರತೆಯಿಂದ ಆರಾಧಿಸಿ ಪೂಜಿಸಲಾಗುತ್ತಿದೆ. ಆ ಪ್ರಯುಕ್ತ ಹಬ್ಬದ ಘಮ ಪರಿಮಳಿಸಿ ವಿಜೃಂಭಣೆಯಿಂದ ಸಾಗುತ್ತಿದೆ.

ವೈವಿಧ್ಯಮಯ ಸಾಮರಸ್ಯ, ಸೌಹಾರ್ದತೆ, ಸಂಸ್ಕೃತಿ, ಪರಂಪರೆ ತೋರಣದ ಪರಿಚಯ ನವರಾತ್ರಿ ಮಹೋತ್ಸವದಲ್ಲಿ ಎದ್ದು ಕಾಣುತ್ತಿದೆ. ನಾರಿ ಲೋಕ ಅತ್ಯೋತ್ಸಾಹದಿಂದ ಪಾಲ್ಗೊಂಡು ದೇವಿಯ ದಿವ್ಯ ದರ್ಶನದೊಂದಿಗೆ ಆಶೀವಾ9ದ ಪಡೆದು ಧನ್ಯತೆಯಲ್ಲಿ ಮಿಂದೆದ್ದಿದ್ದಾರೆ. ಬಣ್ಣದ ಸೀರೆಗಳನ್ನು ಧರಿಸಿಕೊಂಡು ಭವ್ಯತೆಯ ಪರಂಪರೆ ಸಾಕ್ಷೀಕರಿಸುತಾ ಶಾಂತ ಚಿತ್ತದಿಂದ ಭಕ್ತಿ ತರ್ಪಣದಲ್ಲಿ ಲೀನರಾಗಿ ಶುಭ್ರತೆಯ ಪ್ರತಿಬಿಂಬರಾಗಿ ಗೋಚರಿಸುತ್ತಿರುವುದು ಹಬ್ಬಕ್ಕೆ ಸ್ನೇಹ ಭಾವದ ಜೀವ ಕಳೆ ತುಂಬಿದ್ದಾರೆ. ನವರಾತ್ರಿಯ 9 ಪ್ರತಿ ದಿನ ಬೆಳಂ ಬೆಳಿಗ್ಗೆಯೆ ಆಪ್ತತೆ ಮನಭಾವದ ಪ್ರೀತಿಯುಳ್ಳ ಒಡನಾಡಿ ಸ್ನೇಹಿತೆಯರು ಆಯಾ ದಿನದ ಬಣ್ಣ ಬಣ್ಣದ ಸೀರೆ ಲೋಕದಲ್ಲಿ ಸಂಗಮಿಸಿ ಭಕ್ತಿ ಪಾರಮ್ಯದ ಸೌಜನ್ಯ ಪಥ ಹೊಂಗೀರಣದಲ್ಲಿ ಮಿನುಗುತ್ತಿರುವುದು ವಿಶೇಷ.

# ಮನಸ್ಸಿನ ಸಂತೃಪ್ತಿಗಾಗಿ ಪುರಾಣ-ಪ್ರವಚನ ಆಲಿಸಿ :ಮಾಗಣಗೇರಿ ಶ್ರೀ

ಉದಯರಶ್ಮಿ ದಿನಪತ್ರಿಕೆ



ಕಲಕೇರಿ: ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗುವುದರಿಂದ ಪಾಪದ ಹೊರೆ ಕಡಿಮೆಯಾಗಿ ಪುಣ್ಯದ ಫಲ ಪ್ರಾಪ್ತಿಯಾಗುತ್ತದೆ. ಅಲ್ಲದೇ ಮಠಮಾನ್ಯಗಳಲ್ಲಿ ನಡೆಯುವ ಪುರಾಣ ಪುಣ್ಯಕಥೆಗಳನ್ನು ಆಲಿಸುವುದರಿಂದ ಮತ್ತು ವಿಭೂತಿಯನ್ನು ಹಣೆಗೆ ಧರಿಸುವುದರಿಂದ ಮನುಷ್ಯನ ಆರೋಗ್ಯ ಮತ್ತು ಆಯಸ್ಸು ಹೆಚ್ಚುತ್ತದೆ ಎಂದು ಮಾಗಣಗೇರಿಯ ಡಾ.ವಿಶ್ವಾರಾಧ್ಯ ಶಿವಾಚಾರ್ಯರು ಹೇಳಿದರು.

ಕಲಕೇರಿ ಗ್ರಾಮದ ಭವಾನಿ ದೇವಸ್ಥಾನದಲ್ಲಿ ಶರನ್ ನವರಾತ್ರಿಯ ದಸರೆಯ ಪ್ರಯುಕ್ತ ರವಿವಾರ ಸಂಜೆ ಹಮ್ಮಿಕೊಂಡ 33ನೇ ವರ್ಷದ ಪರಮೇಶ್ವರಿ ದೇವಿಯ ಪುರಾಣ ಪ್ರಾರಂಭೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಶಿಷ್ಟರ ರಕ್ಷಣೆ ಮತ್ತು ದುಷ್ಟರ ದಮನ ದೇವಿ ಪುರಾಣದ ಮೂಲಉದ್ದೇಶವಾಗಿದೆ.ಆಧುನಿಕಜೀವನದಜಂಜಾಟಗಳಿಂದ ಹೊರ ಬರಲು ಮನಸ್ಸಿನ ಸಂತೃಪ್ತಿಗಾಗಿ ಮಾನಸಿಕ ನೆಮ್ಮದಿ ಹೊಂದಲು ಪುರಾಣ ಪ್ರವಚನ ಆಲಿಸುವದು ಅತ್ಯವಶ್ಯವಾಗಿದೆ ಎಂದರು. ಕಲಕೇರಿಯ ಗುರುಮರುಳಾರಾಧ್ಯರ ಹಿರೇಮಠದ ಸಿದ್ದರಾಮ ಶಿವಾಚಾರ್ಯರು ಮಾತನಾಡಿ, ಜೀವನದಲ್ಲಿ ಸಾಕಷ್ಟು ಸೌಕರ್ಯಗಳಿದ್ದರೂ ಯುವ ಪೀಳಿಗೆಯಲ್ಲಿ ಮಾನಸಿಕ ನೆಮ್ಮದಿಯ ಕೊರತೆ ಎದ್ದು ಕಾಣುತ್ತಿದೆ, ಅವರಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರದ ಅವಶ್ಯಕತೆಯಿದ್ದು, ನಮ್ಮಲ್ಲಿರುವ ದುರ್ಗುಣಗಳನ್ನು ದೂರ ಮಾಡಿ ಉತ್ತಮ ಸಂಸ್ಕಾರ ನೀಡುವ ಶಕ್ತಿ ದೇವಿ ಪುರಾಣಕ್ಕಿದೆ. ಧರ್ಮದ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಹಿರೂರಿನ ಜಯಸಿದ್ದೇಶ್ವರ ಶಿವಾಚಾರ್ಯರು ಪುರಾಣವನ್ನು ನಡೆಸಿಕೊಟ್ಟರು, ಗದ್ದುಗೆಮಠದ ಗುರುಮಡಿವಾಳೇಶ್ವರ ಶಿವಾಚಾರ್ಯರು, ಜಾಲಹಳ್ಳಿಮಠದ ಡಾ.ವ್ಹಿ ಕೆ ಜಾಲಹಳ್ಳಿಮಠ, ಕುಮಾರಸ್ವಾಮಿ ಜಾಲಹಳ್ಳಿಮಠ ಅಧ್ಯಕ್ಷತೆಯನ್ನು ವಹಿಸಿದ್ದರು, ವೇ.ಮೂ. ಸದಾನಂದ ಹಿರೇಮಠ ನೇತ್ರತ್ವ ವಹಿಸಿದ್ದರು, ಮೃತ್ಯುಂಜಯ ಮಠಪತಿ ಪೂಜಾ ಕೈಂಕರ್ಯ ನೆರವೇರಿಸಿದರು. ಕಡಕೋಳ ಮನೆತನದ ಸುಮಂಗಲೆಯರು ಆರತಿ ಸೇವೆಯನ್ನು ಸಲ್ಲಿಸಿದರು. ದೇವಿ ಉಪಾಸಕ ಮೋತಿಲಾಲ್ ಕುಲಕರ್ಣಿ ಅವರ ನೇತ್ರತ್ವದಲ್ಲಿ ಘಟಸ್ಥಾಪನೆ ಮಾಡಲಾಯಿತು. ಸಂಗಾರಡ್ಡಿ ದೇಸಾಯಿ, ವಿರೇಶ ನಾಡಗೌಡ, ಮಲಕಾಜಪ್ಪಗೌಡ ಬಿರಾದಾರ, ಮಲ್ಲಿನಾಥ ದೇಸಾಯಿ, ಶಾಂತಪ್ಪ ಪಟ್ಟಣಶೆಟ್ಟಿ, ಶಿವಾನಂದ ಸಾತಿಹಾಳ, ರಾಮರಾವ ನಾಡಗೌಡ, ದೇವಿಂದ್ರ ಜಂಬಗಿ, ಕುಮಾರ ದೇಸಾಯಿ, ಅರವಿಂದ ಬೇನಾಳ, ದೇವಿಂದ್ರ ಕಡಕೋಳ, ನಿಂಗನಗೌಡ ಗುಂಡಕನಾಳ, ಶ್ರೀಶೈಲ ಬಡಗೇರ ಸೇರಿದಂತೆ ಇತರರು

# ಅ.21ರಂದು ಅಂಚೆ ಅದಾಲತ್: ಅಹವಾಲು ಸಲ್ಲಿಸಲು ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತೀಯ ಅಂಚೆ ಇಲಾಖೆಯ ವಿಜಯಪುರ ವಿಭಾಗದ ವತಿಯಿಂದ 2026-27ನೇ ಸಾಲಿನ ವಿಭಾಗೀಯ ಅಂಚೆ ಅದಾಲತ್ ಅನ್ನು ಅ.21ರಂದು ಮಧ್ಯಾಹ್ನ 3 ಗಂಟೆಗೆ ವಿಜಯಪುರದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ವಿಜಯಪುರ ಅಂಚೆ ವಿಭಾಗದ ವ್ಯಾಪ್ತಿಗೆ ಒಳಪಡುವ ಬಬಲೇಶ್ವರ, ಬಸವನ ಬಾಗೇವಾಡಿ, ಚಡಚಣ, ದೇವರ ಹಿಪ್ಪರಗಿ, ಇಂಡಿ, ಕೊಲ್ಹಾರ, ಮುದ್ದೇಬಿಹಾಳ, ನಿಡಗುಂದಿ, ಸಿಂದಗಿ, ತಾಳಿಕೋಟೆ, ತಿಕೋಟಾ, ಆಲಮೇಲ ಹಾಗೂ ವಿಜಯಪುರ ತಾಲೂಕುಗಳ ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರು, ಸಲಹೆ ಮತ್ತು ಸೂಚನೆಗಳನ್ನು ಸಾರ್ವಜನಿಕರು ಸಲ್ಲಿಸಬಹುದಾಗಿದೆ. ಅಹವಾಲುಗಳನ್ನು ಲಿಖಿತ ರೂಪದಲ್ಲಿಸಿದ್ಧಪಡಿಸಿ,ಲಕೋಟೆಯ ಮೇಲ್ಭಾಗದಲ್ಲಿ 'ಅಂಚೆ ಅದಾಲತ್‌ನಲ್ಲಿ ವಿಚಾರಣೆಗೆ' ಎಂದು ನಮೂದಿಸಿ ಯಾವುದೇ ಅಂಚೆ ಕಚೇರಿಯಲ್ಲಿ ರವಾನೆಗೆ ಸಲ್ಲಿಸಬಹುದು. ಇಂತಹ ಲಕೋಟೆಗಳಿಗೆ ಅಂಚೆ ವೆಚ್ಚ ಭರಿಸುವ ಅಗತ್ಯವಿರುವುದಿಲ್ಲ. ದೂರು, ಸಲಹೆ ಮತ್ತು ಸೂಚನೆಗಳು ಅ.16ರೊಳಗೆ ಅಂಚೆ ಅಧೀಕ್ಷಕರು,ವಿಜಯಪುರ ವಿಭಾಗ, ವಿಜಯಪುರ 586104 ಇವರ ಕಚೇರಿಗೆ ತಲುಪುವಂತೆ ಕಳುಹಿಸಬೇಕು.

ಈ ವಿಭಾಗೀಯ ಅಂಚೆ ಅದಾಲತ್‌ನಲ್ಲಿ ವಿಜಯಪುರ ವಿಭಾಗದ ಅಂಚೆ ಕಚೇರಿಗಳಿಂದ ಪ್ರಸ್ತುತ ಒದಗಿಸಲಾಗುತ್ತಿರುವ ಸೇವೆಗಳಲ್ಲಿನ ಕೊರತೆಗಳು ಹಾಗೂ ಅವುಗಳನ್ನು ಸುಧಾರಿಸುವ ಕುರಿತು ಸಲ್ಲಿಸುವ ಸಲಹೆ ಮತ್ತು ಸೂಚನೆಗಳನ್ನು ಮಾತ್ರ ಚರ್ಚಿಸಲಾಗುವುದು. ಇಲಾಖೆಯ ಕಾರ್ಯನೀತಿ ಮತ್ತು ಧೋರಣೆಗಳಿಗೆ ಸಂಬಂಧಿಸಿದ ಸಲಹೆ ಹಾಗೂ ಸೂಚನೆಗಳನ್ನು ಈ ಅದಾಲತ್‌ನಲ್ಲಿ ಚರ್ಚಿಸಲಾಗುವುದಿಲ್ಲ. ಅಂತಹ ವಿಷಯಗಳ ಕುರಿತು ಪ್ರತ್ಯೇಕವಾಗಿ ಲಿಖಿತವಾಗಿ ತಿಳಿಸಿದಲ್ಲಿ, ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದ ಮೇಲಧಿಕಾರಿಗಳಿಗೆ ಕಳುಹಿಸಲಾಗುವುದು ಎಂದು ವಿಜಯಪುರ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ.19ರಂದು ಜಪ್ತಿ ವಾಹನಗಳ ಬಹಿರಂಗ ಹರಾಜು

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಇಂಡಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವಿವಿಧ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಪ್ತಿ ಮಾಡಿ ಮುಟ್ಟುಗೋಲು ಹಾಕಿಕೊಂಡಿರುವ ವಿವಿಧ ಮಾದರಿಯ ದ್ವಿಚಕ್ರ ವಾಹನಗಳನ್ನು ಅಕ್ಟೋಬರ್ 19ರಂದು ಬಹಿರಂಗವಾಗಿ ಹರಾಜು ಮಾಡಲಾಗುವುದು ಎಂದು ಇಂಡಿ ಪೊಲೀಸ್ ಠಾಣೆ ಪ್ರಕಟಣೆಯಲ್ಲಿ ತಿಳಿಸಿದೆ. ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಇಂಡಿ ಅವರ ಆದೇಶದ ಮೇರೆಗೆ, ಅಕ್ಟೋಬರ್ 19, 2026ರಂದು ಬೆಳಿಗ್ಗೆ 11 ಗಂಟೆಗೆ ಇಂಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ.

ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಸಾರ್ವಜನಿಕರು ಅಕ್ಟೋಬರ್ 17, 2026ರ ಸಂಜೆ 5 ಗಂಟೆಯೊಳಗೆ ಇಂಡಿ ಪೊಲೀಸ್ ಠಾಣೆಗೆ ಭೇಟಿ ನೀಡಿ ನಿಗದಿತ ಮುಂಗಡ ಠೇವಣಿ ಹಣವನ್ನು ಪಾವತಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಇಂದು ವಿಜಯಪುರಕ್ಕೆ 'ವಿಜಯ ಜ್ಯೋತಿ ಯಾತ್ರೆ'

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಿತ್ತೂರು ಉತ್ಸವ-2026ರ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ 'ವಿಜಯ ಜ್ಯೋತಿ ಯಾತ್ರೆ' ಅಕ್ಟೋಬರ್ 14ರಂದು ವಿಜಯಪುರ ಜಿಲ್ಲೆಗೆ ಆಗಮಿಸಲಿದೆ. ಅಂದು ಸಂಜೆ 6.30ಕ್ಕೆ ಕೋಲಾರ ಮಾರ್ಗವಾಗಿ ವಿಜಯಪುರ ನಗರ ಪ್ರವೇಶಿಸಲಿರುವ ಯಾತ್ರೆಯನ್ನು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಗೌರವಪೂರ್ವಕವಾಗಿ ಸ್ವಾಗತಿಸಿ, ಪೂಜಾ ಕಾರ್ಯಕ್ರಮ ನೆರವೇರಿಸಲಾಗುವುದು.ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸ್ವಾಗತ ಹಾಗೂ ಪೂಜಾ ಕಾರ್ಯಕ್ರಮದ ಬಳಿಕ ವಿಜಯ ಜ್ಯೋತಿ ಯಾತ್ರೆಯು ವಿಜಯಪುರ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ತಿಕೋಟಾ ಮಾರ್ಗವಾಗಿ ಅಥಣಿಯತ್ತ ಪ್ರಯಾಣ ಮುಂದುವರಿಸಲಿದೆ. ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿಜಯ ಜ್ಯೋತಿ ಯಾತ್ರೆಯನ್ನು ಯಶಸ್ವಿಗೊಳಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಕೂಡಗಿ ಗ್ರಾಮದ ನಿವಾಸಿ ಉಮರಫಾರೂಕ ತಂದೆ ಹಮೀದ ಕೋರಬು (28) ಎಂಬ ವ್ಯಕ್ತಿ ಕಾಣೆಯಾಗಿದ್ದು, ಈ ಕುರಿತು ಕೂಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದ ವ್ಯಕ್ತಿಯ ಪತ್ತೆಗೆ ಸಹಕರಿಸುವಂತೆ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಕಾಣೆಯಾದ ವ್ಯಕ್ತಿಯು 5.2 ಅಡಿ ಎತ್ತರ, ಸಾದಾ ಕಪ್ಪು ಮೈಬಣ್ಣ ಹಾಗೂ ಗುಂಡು ಮುಖ ಹೊಂದಿದ್ದು,

ಕನ್ನಡ ಮತ್ತು ಹಿಂದಿ ಭಾ ಮಾತನಾಡುತ್ತಿದ್ದು, ಕಾಣೆಯಾದ ಸಂದರ್ಭದಲ್ಲಿ ನೀಲಿ ಬಣ್ಣದ ಅಂಗಿ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು,ಈ ಚಹರೆಪಟ್ಟಿಯುಳ್ಳ ವ್ಯಕ್ತಿ ಯಾರಿಗಾದರೂ ಕಂಡುಬಂದಲ್ಲಿ ಅಥವಾ ಈ ಬಗ್ಗೆ ಮಾಹಿತಿ ದೊರೆತಲ್ಲಿ ಕೂಡಗಿ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.



# ಚೆಸ್: ರಾಜ್ಯಮಟ್ಟಕ್ಕೆ ಭೂಮಿಕಾ & ಸ್ಫೂರ್ತಿ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಬಬಲೇಶ್ವರದಲ್ಲಿ ನಡೆದ ವಿಜಯಪುರ ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ತಾಳಿಕೋಟೆ ತಾಲೂಕಿನ ವಿದ್ಯಾರ್ಥಿನಿಯರಾದ ಭೂಮಿಕಾ ಮಡ್ಡಿ ಹಾಗೂ ಸ್ಫೂರ್ತಿ ಹರನಾಳ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.

ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಯ ವಿದ್ಯಾರ್ಥಿನಿ ಭೂಮಿಕಾ ಮಡ್ಡಿ ಅವರು 14 ವರ್ಷದೊಳಗಿನವರ (ಯು-14) ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದರೆ, ಆಕ್ಸಫರ್ಡ ಪಾಟೀಲ ಶಾಲೆ, ಬಿದರಕುಂದಿಯ ವಿದ್ಯಾರ್ಥಿನಿ ಸ್ಫೂರ್ತಿ ಹರನಾಳ ಅವರು 17 ವರ್ಷದೊಳಗಿನವರ (ಯು-17) ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿನಿಯರ ಈ ಸಾಧನೆಗೆ ಶಾಲೆಯ ಪ್ರಾಂಶುಪಾಲರಾದ ಚಂದ್ರಶೇಖರ ಸಜ್ಜನ, ದೈಹಿಕ ಶಿಕ್ಷಣ ಶಿಕ್ಷಕರಾದ ವಿಜಯಮಹಾಂತೇಶ ಸ್ಥಾವರಮಠ, ನಿಲಯಪಾಲಕರಾದ ಸೋಮನೌಡ ಮರಡ್ಡಿ ಸೇರಿದಂತೆ ಎರಡೂ ಶಾಲೆಗಳ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಬೆಳಗಾವಿ ವಿಭಾಗ ಮಟ್ಟದ ಪಂದ್ಯಾವಳಿಗೆ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ಬಸವನ ಬಾಗೇವಾಡಿ ತಾಲ್ಲೂಕಿನ ನರಸಲಗಿ ಗ್ರಾಮದಲ್ಲಿ ಅ.12ರಂದು ನಡೆದ ವಿಜಯಪುರ ಜಿಲ್ಲಾ ಮಟ್ಟದ 14 ವರ್ಷ ವಯೋಮಿತಿಯ ಬಾಲಕರ ಕಬಡ್ಡಿ ಪಂದ್ಯಾವಳಿಯಲ್ಲಿ ತಾಳಿಕೋಟೆ ಪಟ್ಟಣದ ಮೈಲೇಶ್ವರ ಕ್ರಾಸ್‌ದ ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಬ್ರಿಲಿಯಂಟ್ ಶಾಲೆಯ ವಿದ್ಯಾರ್ಥಿಗಳು ಅಮೋಘ ಸಾಧನೆ ಮಾಡಿದ್ದಾರೆ. ಪಂದ್ಯಾವಳಿಯ ಫೈನಲ್‌ನಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ ತಂಡವನ್ನು ಮಣಿಸಿದ ಬ್ರಿಲಿಯಂಟ್ ಶಾಲೆಯ ಬಾಲಕರು ಪ್ರಥಮ ಸ್ಥಾನ ಪಡೆದು, ಬೆಳಗಾವಿ ವಿಭಾಗ ಮಟ್ಟದ ಕಬಡ್ಡಿ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಯಿಂದ ಶಾಲೆ ಹಾಗೂ ತಾಲೂಕಿನ ಕೀರ್ತಿ ತಂದಂತಾಗಿದೆ. ಬಾಲಕರ ಕ್ರೀಡಾ ಸಾಧನೆಗೆ ಜಿಲ್ಲೆಯ ಮತ್ತು ಮುದ್ದೇಬಿಹಾಳ ತಾಲ್ಲೂಕಿನ ಕ್ರೀಡಾಧಿಕಾರಿಗಳು, ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಬ್ರಿಲಿಯಂಟ್ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸರ್ವ ಶಿಕ್ಷಕ ಬಳಗ ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಸಮಾಜಮುಖಿ ಕೆಲಸಕ್ಕೆ ಎಲ್ಲರೂ ಕೈಜೋಡಿಸಬೇಕು : ಸಾಂಗ್ಲೀಕರ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಈಗಿನ ಕಾಲದಲ್ಲಿ ಸಮಾಜಮುಖಿ ಕೆಲಸ ಮಾಡುವವರು ಕಡಿಮೆಯಾಗಿದ್ದಾರೆ ಇಂತಹ ಕ್ಲಿಷ್ಟ ಸಮಯದಲ್ಲಿ ರವಿ ಕಾಂಬಳೆ ಅವರು ಒಳ್ಳೆಯ ಸಮಾಜಮುಖಿ ಕೆಲಸ ಮಾಡಲು ಮುಂದೆ ಬಂದಿದ್ದಾರೆ ಅವರಿಗೆ ಎಲ್ಲರೂ ಕೈಜೋಡಿಸಿದರೆ ಮಾತ್ರ ಶಕ್ತಿ ಬರುತ್ತದೆ ಎಂದು ಮಹಾರಾಷ್ಟ್ರದ ರಾಜ್ಯದ ಗೂಗವಾಡ ದಮ್ಮ ಭೂಮಿ ಸಂಸ್ಥಾಪಕ ಸಿ.ಆರ್. ಸಾಂಗ್ಲೀಕರ್ ಹೇಳಿದರು.

ಅವರು ಅಥಣಿ ಪಟ್ಟಣದ ಖೋತ ಸಭಾಭವನದಲ್ಲಿ ಶ್ರೀಮತಿ ಸಾಯವ್ವ ಶ್ರೀಕಾಂತ ಫೌಂಡೇಶನ್ ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡಿದರು, ಫೌಂಡೇಶನ್ ವತಿಯಿಂದ ಹಲವಾರು ಜನಪರ ಕೆಲಸಗಳನ್ನು ಮಾಡಲು ಅವಕಾಶವಿದೆ ಸರ್ಕಾರದಿಂದ ಹಲವಾರು ಯೋಜನೆಗಳಿದ್ದು ಅವು ಸರಿಯಾಗಿ ಬಡವರಿಗೆ ಮುಟ್ಟುತ್ತಿಲ್ಲ ಈ ಫೌಂಡೇಶನ್ ಮೂಲಕ ಬಡವರಿಗೆ ಸೌಲಭ್ಯ ಒದಗಿಸಿಕೊಡಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನೆ ಸಂಚಾಲಕ ಸಂಜಯ ತಳವಲಕರ್ ಮಾತನಾಡಿ, ರವಿ ಕಾಂಬಳೆ ಅವರು ತಮ್ಮ ತಾಯಿ ತಂದೆಯ ಹೆಸರಿನಲ್ಲಿ ಒಂದು ಫೌಂಡೇಶನ್ ಮಾಡಿರುವುದು ಹೆಮ್ಮೆಯ ವಿಷಯವಾಗಿದೆ.

ಈ ಫೌಂಡೇಶನ್ ವತಿಯಿಂದ ಹಲವಾರು ಜನಪರ ಕೆಲಸಗಳನ್ನು ಮಾಡಲು ಮುಂದಾಗಿದ್ದಾರೆ. ಅದಕ್ಕೆ ಎಲ್ಲರೂ ಸಹಾಯ ಸಹಕಾರ ನೀಡಬೇಕು. ನಮ್ಮ ಸಂಘಟನೆ ಈ ಫೌಂಡೇಶನ್ ಜೊತೆ ಸದಾ ಇರುತ್ತದೆ ಎಂದು ಹೇಳಿದರು.

ಮಾಜಿ ಶಾಸಕ ಮಹೇಶ ಕುಮಠಳ್ಳಿ ಮಾತನಾಡಿ, ಈ ಫೌಂಡೇಶನ್ ಹಲವಾರು ಜನಪರ ಕೆಲಸ ಮಾಡಲು ಮುಂದೆ ಬಂದಿದೆ ಇದು ಒಬ್ಬರಿಂದ ಆಗುವ ಕೆಲಸವಲ್ಲ ಎಲ್ಲರೂ ಸಹಕಾರ ಮಾಡಿದರೆ ಒಳ್ಳೆಯ ಜನಪರ ಕೆಲಸಗಳನ್ನು ಮಾಡಲು ಫೌಂಡೇಶನ್‌ಗೆ ಒಂದು ಶಕ್ತಿ ಬರುತ್ತದೆ ಎಂದರು.

ಸಮಾರಂಭದಲ್ಲಿ ಪದ್ಮಶ್ರೀ ಪುರಸ್ಕೃತರಾದ ಸೀತವ್ವ ಜೋಡಟ್ಟಿ, ಡಾ. ಆನಂದ ಗುಂಜಿಗಾಂವಿ, ಡಾ. ಕವಿತಾ ಕೋಟ್ರೆ, ಡಾ. ಸದಾಶಿವ ಭಜಂತ್ರಿ ಮಾತನಾಡಿದರು.

ದಿವ್ಯ ಸಾನಿಧ್ಯವನ್ನು ಹಾಲಹಳ್ಳಿ ಬುದ್ಧ ವಿಹಾರದ ಬಂತೇಜಿ ವಹಿಸಿ ಮಾತನಾಡಿದರು.

ಈ ವೇಳೆ ಕೃಷ್ಣ ಸಕ್ಕರೆ ಕಾರ್ಖಾನೆ ಸದಸ್ಯ ಘೂಳಪ್ಪ ಜತ್ತಿ, ಅಥಣಿ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ, ಅಥಣಿ ಕಾಂಗ್ರೆಸ್ ಮುಖಂಡ ರಮೇಶ ಸಿಂಧಗಿ, ಪುರಸಭೆ ಸದಸ್ಯ ರಾವಸಾಬ ಐಹೊಳೆ, ಕೋಮಲ ಕಾಂಬಳೆ, ಫೌಂಡೇಶನ್ ಅಧ್ಯಕ್ಷ ರವಿ ಕಾಂಬಳೆ, ಕಾರ್ಯದರ್ಶಿ ಭೀರಪ್ಪ ಕಾಂಬಳೆ, ಶಿವಾನಂದ ಗೋಲಬಾಂವಿ, ಕುಮಾರ ಪಾಟೀಲ, ಅಭಾ ಚವಾಣ, ಮಹೇಂದ್ರ ಖಾಂಡೇಕರ, ಕುಮಾರ ಬನಸೋಡಿ, ಪಂಡಿತ ಕಾಂಬಳೆ, ಅಶೋಕ ಚೌಗಲಾ, ನಿಜಾಮ್ ಮುಲ್ಲಾ, ದತ್ತು ಕಾಂಬಳೆ, ಪಾಂಡುರಂಗ ಕಾಂಬಳೆ, ರಮೇಶ ತಳಕೇರಿ, ಮಹಾದೇವ ಮಾದರ, ಅಮರ ಕಾಂಬಳೆ, ನೀಲಕಂಠ ಕಾಂಬಳೆ, ಅಶೋಕ ನಿಡೋಣಿ, ವಿಲಾಸ ಕಾಂಬಳೆ, ವಿಜಯ ಅಸೂದೆ, ಸುಧಾಕರ ಬಳವಾಡಕರ, ವಿಠ್ಠಲ ಕಾಂಬಳೆ, ತುಕಾರಾಮ ಭಜಂತ್ರಿ, ಚಂದು ಬನಸೋಡಿ, ರಾಜು ಕಾಂಬಳೆ,ರಮೇಶ ಕಾಂಬಳೆ, ಅಪ್ಪು ಪವಾರ, ಶಿವಶಂಕರ ಸಿಂಗೆ, ಮಧುಕರ ಕಾಂಬಳೆ, ಈಶ್ವರ ದೊಡಮನಿ, ಶಂಕರ ಕಾಂಬಳೆ, ರಾಘವೇಂದ್ರ ದೊಡಮನಿ,ಸೇರಿದಂತೆ ಇನ್ನಿತಿತರು ಉಪಸ್ಥಿತರಿದ್ದರು.

# ಶಾಸಕರ ಹುಟ್ಟುಹಬ್ಬದ ಸಂಭ್ರಮಕ್ಕೆ ಹಸಿರಿನ ಮೆರುಗು

## ಶಾಂತೇಶ್ವರ ವಿದ್ಯಾವರ್ಧಕ ಸಂಘದಿಂದ 1,000 ಸಸಿ ನೆಡುವ ಅಭಿಯಾನ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಜನಪ್ರತಿನಿಧಿಗಳ ಜನ್ಮದಿನಾಚರಣೆ ಕೇವಲ ಸಂಭ್ರಮಕ್ಕೆ ಸೀಮಿತವಾಗದೆ, ಸಮಾಜಕ್ಕೆ ಉಪಯುಕ್ತವಾದ ಕಾರ್ಯಗಳ ಮೂಲಕ ಜನಮನದಲ್ಲಿ ಉಳಿಯಬೇಕು ಎಂಬ ಆಶಯದೊಂದಿಗೆ ಶನಿವಾರದಂದು ಇಂಡಿ ಶಾಸಕರಾದ ಯಶವಂತರಾಯಗೌಡ ವಿ. ಪಾಟೀಲ ಅವರ ಜನ್ಮದಿನವನ್ನು ಪರಿಸರಸ್ನೇಹಿಯಾಗಿ ಆಚರಿಸಲಾಯಿತು.

ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘದ ಆವರಣದಲ್ಲಿ 1,000 ಸಸಿಗಳನ್ನು ನೆಡುವ ಮೂಲಕ ಹಸಿರು ಪರಿಸರ ನಿರ್ಮಾಣ ಹಾಗೂ ಬರಮುಕ್ತ ಭವಿಷ್ಯದ ಸಂಕಲ್ಪಕ್ಕೆ ಸಂಸ್ಥೆ ಚಾಲನೆ ನೀಡಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ನೀಲಕಂಠಗೌಡ ಎಸ್. ಪಾಟೀಲ ಅವರು, ಇಂಡಿ ವಿಧಾನಸಭಾ ಕ್ಷೇತ್ರದ ಶಾಸಕ ಯಶವಂತರಾಯಗೌಡ ವಿ. ಪಾಟೀಲ ಅವರು ಜನರೊಂದಿಗೆ ಬೆರೆತು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂದರ್ಭದಲ್ಲಿ ಅವರ ಜನ್ಮದಿನವನ್ನು ಪರಿಸರ ಸಂರಕ್ಷಣೆಯಂತಹ ಸಮಾಜಮುಖಿ ಕಾರ್ಯದೊಂದಿಗೆ ಆಚರಿಸಿರುವುದು ವಿಶೇಷ ಮಹತ್ವ ಪಡೆದಿದೆ.

ಸಾಮಾನ್ಯವಾಗಿ ಜನ್ಮದಿನಾಚರಣೆಗಳು ಕೇಕ್ ಕತ್ತರಿಸುವುದು, ಪಟಾಕಿ ಸಿಡಿಸುವುದು ಹಾಗೂ ಆಡಂಬರದ ಕಾರ್ಯಕ್ರಮಗಳಿಗೆ ಸೀಮಿತವಾಗುತ್ತವೆ. ಆದರೆ, ಪರಿಸರದ ಮಹತ್ವವನ್ನು ಸಾರುವ ಉದ್ದೇಶದಿಂದ ಸಸಿ ನೆಡುವ ಕಾರ್ಯಕ್ರಮ ಆಯೋಜಿಸುವ ಮೂಲಕ ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘವು ವಿಭಿನ್ನ ಮಾದರಿಯನ್ನು ಪರಿಚಯಿಸಿದೆ. ಸಂಘದ ಆವರಣದಲ್ಲಿ ಗಣ್ಯರು ಹಾಗೂ ಮುಖಂಡರು ಸಸಿಗಳನ್ನು ನೆಟ್ಟು ನೀರೆರೆಯುವ ಮೂಲಕ ಶಾಸಕರಿಗೆ ದೀರ್ಘಾಯುಷ್ಯ, ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಇನ್ನಷ್ಟು ಯಶಸ್ಸು ದೊರೆಯಲಿ ಎಂದು ಹಾರೈಸಿದರು.

ಈ ಅಭಿಯಾನದ ವಿಶೇಷತೆಯೆಂದರೆ, ನೆಟ್ಟ ಸಸಿಗಳು ಕೇವಲ ಕಾರ್ಯಕ್ರಮದ ನೆನಪಾಗಿ ಉಳಿಯದೆ, ಬೆಳೆದು ಮರಗಳಾಗುವವರೆಗೆ ಅವುಗಳ ಆರೈಕೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಂಕಲ್ಪ ಮಾಡಿರುವುದು. ನೆಟ್ಟ ಸಸಿಗಳಿಗೆ ನಿಯಮಿತವಾಗಿ ನೀರುಣಿಸಿ, ಸಂರಕ್ಷಿಸಿ ಬೆಳೆಸಿದಾಗ ಮಾತ್ರ ಈ ಪ್ರಯತ್ನದ ನಿಜವಾದ ಉದ್ದೇಶ ಈಡೇರಲಿದೆ.

ಬರದ ಸಮಸ್ಯೆ, ಹೆಚ್ಚುತ್ತಿರುವ ತಾಪಮಾನ ಹಾಗೂ ಹಸಿರು ಹೊದಿಕೆಯ ಅಗತ್ಯವನ್ನು ಮನಗಂಡು ಹಮ್ಮಿಕೊಂಡ ಈ ಕಾರ್ಯಕ್ರಮವು ಪರಿಸರ ಸಂರಕ್ಷಣೆಯ ಜೊತೆಗೆ ಸಾಮಾಜಿಕ ಜವಾಬ್ದಾರಿಯ ಮಹತ್ವವನ್ನೂ ಸಾರಿತು. ಶಾಸಕ ಯಶವಂತರಾಯಗೌಡ ವಿ. ಪಾಟೀಲ ಅವರ ಜನ್ಮದಿನದ ಅಂಗವಾಗಿ ಕೈಗೊಂಡ ಈ ಹಸಿರು ಅಭಿಯಾನವು ಆಡಂಬರಕ್ಕಿಂತ ಜನೋಪಯೋಗಿ ಕಾರ್ಯವೇ ಶ್ರೇಷ್ಠ ಎಂಬ ಸಂದೇಶವನ್ನು ನೀಡಿದ್ದು, ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಶಾಂತುಗೌಡ ಬಿರಾದಾರ, ರಾಜುಗೌಡ ಪಾಟೀಲ, ವರ್ಧನ ದೋಶಿ, ಸದಸ್ಯರಾದ ರವಿಗೌಡ ಪಾಟೀಲ, ಪ್ರಾ. ಶ್ರೀಶೈಲ ಸಣ್ಣಕ್ಕಿ. ವಿಜಯಕುಮಾರ ರಾಠೋಡ, ಅಶೋಕ ಬಿರಾದಾರ, ಸಿ.ಎಸ್. ಬಿರಾದಾರ, ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ಚಿಂಚಲಿ ಶ್ರೀ ಮಾಯಮ್ಮ ತಾಯಿಯ ಹಬ್ಬ ಸಂಪನ್ನ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ತಾಲೂಕಿನ ಅಂಜುಟಗಿ ಗ್ರಾಮದಲ್ಲಿ ಶ್ರೀ ಮಾಳಿಂಗರಾಯ ದೇವರ ಸಪ್ತಾಹದ ಅಂಗವಾಗಿ ಆದಿಶಕ್ತಿ ಚಿಂಚಲಿ ಶ್ರೀ ಮಾಯಮ್ಮ ತಾಯಿಯ ಹಬ್ಬವನ್ನು ಅತ್ಯಂತ ಭಕ್ತಿಭಾವ ಹಾಗೂ ಸಡಗರದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಜೆಡಿಎಸ್ ಪಕ್ಷದ ಇಂಡಿ ತಾಲೂಕಾ ಅಧ್ಯಕ್ಷ ಬಿ.ಡಿ. ಪಾಟೀಲ, "ಶ್ರೀ ಮಾಯಮ್ಮ ತಾಯಿಯು ಲೋಕ ಕಲ್ಯಾಣಕ್ಕಾಗಿ ಹಾಗೂ ದುಷ್ಟರ ಸಂಹಾರಕ್ಕಾಗಿ ಭೂಮಿಯ ಮೇಲೆ ಅವತರಿಸಿದ ಸಾಕ್ಷಾತ್ ಆದಿಶಕ್ತಿಯಾಗಿದ್ದಾಳೆ. ಇಂದಿನ ದಿನಗಳಲ್ಲಿ ದೇಶದ ಬೆನ್ನೆಲುಬಾದ ರೈತರು ಕೃಷಿ ವೆಚ್ಚದ ಹೆಚ್ಚಳ, ಬೆಳೆ ನಷ್ಟ ಹಾಗೂ ತಾವು ಬೆಳೆದ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದೆ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ರೈತರ ಕಷ್ಟ-ಕಾರ್ಪಣ್ಯಗಳು ದೂರವಾಗಿ, ಉತ್ತಮ ಮಳೆಯಾಗಿ, ಬೆಳೆಗಳು ಸಮೃದ್ಧಿಯಾಗುವ ಮೂಲಕ ನಾಡಿನ ಅನ್ನದಾತರು ಸುಖ-ಶಾಂತಿಯಿಂದ ಬದುಕುವಂತಾಗಲಿ ಎಂದು ತಾಯಿಯಲ್ಲಿ ಪ್ರಾರ್ಥಿಸೋಣ" ಎಂದರು.

ಇದೇ ಸಂದರ್ಭದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರರಾದ ಪ್ರಭುರಾಜ್ ಸುರೇಶ್ ಡೆಂಗಿ, ಮಾಳು ಸಾವ್ಕಾರ್ ಹೊನ್ನುಗೊಂಡ, ಯಲ್ಲಾಲಿಂಗ ಸಿ. ಹೂಗಾರ, ಸುಭಾಷ್ ಅಚ್ಚಿಗೇರ್, ಬಾಗು ಸೌಕಾರ್ ಹೂಗಾರ್, ಶಂಕರ್ ಆಸಂಗಿ, ಚಿದಾನಂದ ಪರುಗೊಂಡ, ರಮೇಶ್ ಪರುಗೊಂಡ, ಶಿವಪ್ಪ ಕವಡಿ, ಬಂಡು ಅಲ್ಲಬಗೊಂಡ, ಭೀಮರಾಯ ಬಬಲಾದಿ, ತುಕಾರಾಂ ಕವಡಿ ಸೇರಿದಂತೆ ಗ್ರಾಮದ ಹಿರಿಯರು, ಯುವ ಮುಖಂಡರು ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಉಪಸ್ಥಿತರಿದ್ದರು.

# ಸಿಎಂ ಉಕ ಅವಹೇಳನಕಾರಿ ಹೇಳಿಕೆಗೆ ಕದಂಬ ಸೈನ್ಯ ಖಂಡನೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಉತ್ತರ ಕರ್ನಾಟಕದ ಕನ್ನಡಿಗರು ಕೂಲಿ ಕೆಲಸಕ್ಕೆ ಬಂದು ವಾಪಸ್ ಹೋಗುವುದೇ ಇಲ್ಲ ಎಂಬಿತ್ಯಾದಿಯಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆರೋಪ ಮಾಡಿರುವುದನ್ನು ಕದಂಬ ಸೈನ್ಯ ಕನ್ನಡ ಸಂಘಟನೆ (ರಿ) ಉಗ್ರವಾಗಿ ಖಂಡಿಸಿದೆ.

ಕನ್ನಡ ನಾಡು ಒಂದೇ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಮಲೆನಾಡು, ಬಯಲುಸೀಮೆ ಎಂಬ ಭೇದವಿಲ್ಲದೆ ನಾವೆಲ್ಲರೂ ಕನ್ನಡ ತಾಯಿಯ ಮಕ್ಕಳು. ಕನ್ನಡಿಗನು ಕರ್ನಾಟಕದಲ್ಲಿ ಎಲ್ಲಿ ಬೇಕಾದರೂ ಬದುಕುವ, ದುಡಿಯುವ ಹಕ್ಕು ಸಂವಿಧಾನಬದ್ಧ ಹಕ್ಕು. ಅದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲ.

ಬೆಂಗಳೂರು ಕಟ್ಟಿದ್ದೇ ಉತ್ತರ ಕರ್ನಾಟಕ,ಕಲ್ಯಾಣ ಕರ್ನಾಟಕದ ಕನ್ನಡಿಗರ ಬೆವರಿನಿಂದ. ಇಂದು ಬೆಂಗಳೂರಿನ ಪ್ರತಿ ಕಟ್ಟಡ, ಪ್ರತಿ ರಸ್ತೆಯಲ್ಲಿ ನಮ್ಮ ಉತ್ತರ ಕರ್ನಾಟಕದ ಅಣ್ಣ-ತಮ್ಮಂದಿರ ರಕ್ತ, ಬೆವರು ಇದೆ. ಅವರನ್ನು ಕೂಲಿ ಎಂದು ಹೀಯಾಳಿಸುವುದು ಅಕ್ಷಮ್ಯ. ಕನ್ನಡಿಗರನ್ನು ಉತ್ತರ-ದಕ್ಷಿಣ ಎಂದು ಒಡೆಯುವ ಪ್ರಯತ್ನ ನಿಲ್ಲಿಸಿ ಎಂದು ಕದಂಬ ಸೈನ್ಯ ಎಚ್ಚರಿಕೆ ನೀಡಿದೆ.

ಕೂಡಲೇ ಡಿ.ಕೆ. ಶಿವಕುಮಾರ್ ಅವರು ತಮ್ಮ ಹೇಳಿಕೆಯನ್ನು ಹಿಂಪಡೆದು ಉತ್ತರ ಕರ್ನಾಟಕದ ಜನರ ಕ್ಷಮೆ ಕೇಳಬೇಕು. ಇಲ್ಲವಾದರೆ ರಾಜ್ಯಾದ್ಯಂತ ಕನ್ನಡಿಗರನ್ನು ಜಾಗೃತಿ ಮೂಡಿಸುವ ಕೆಲಸ ಮಾಡಿ ಚಳವಳಿ ರೂಪಿಸುತ್ತೇವೆ ಎಂದು ಬೇಕ್ರಿ ರಮೇಶ್

ರಾಜ್ಯಾಧ್ಯಕ್ಷ, ರಾಜ್ಯ ಉಪಾಧ್ಯಕ್ಷ ಎನ್ ಸಿ ಕಾಂಬಳೆ, ರಾಜ್ಯ ಕಾರ್ಯದರ್ಶಿ ವಿನಾಯಕ ಸೊಂಡೂರ, ಈರಯ್ಯ ಹಿರೇಮಠ ವಿಜಯಪುರ ಜಿಲ್ಲೆ ಅಧ್ಯಕ್ಷ,

ಇಫಾ9ನ್ ಬೀಳಗಿ ಜಿಲ್ಲಾ ಉಪಾಧ್ಯಕ್ಷ ಮತ್ತು ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR